# ಅನಂತಪಥ

ANANTHKUMAR PRATISHTHANA

ಪುಟ 6
ಅಸ್ಮಿತೆ- ಕ್ಷಾತ್ರತೇಜ
ಸೇವಾ ಉತ್ಸವದ ಉದ್ಘೋಷ ಭಾಷಣ





ಸಂಪುಟ - 5 | ಫೆಬ್ರವರಿ - 2025 | ಸಂಚಿಕೆ - 56


## ಪ್ರೇರಣಾದಾಯೀ ಸ್ಮಾರಕಕ್ಕೂ ವಿವಾದವೇ?



ಶ್ರೀ ಅನಂತಕುಮಾರರು ದೇಶದ ಪ್ರಗತಿಯ ಕನಸು ಕಾಣುತ್ತಿದ್ದ ಅಪರೂಪದ ಜನನಾಯಕ. ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಸತತವಾಗಿ 6 ಬಾರಿ ಆಯ್ಕೆಯಾಗಿ, ಶ್ರೀ ಅಟಲ್ ಬಿಹಾರಿ ವಾಜಪೇಯೀ ಮತ್ತು ಶ್ರೀ ನರೇಂದ್ರ ಮೋದಿಯವರ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವರಾಗಿ ಸೇವೆ ಸಲ್ಲಿಸಿದ ಶ್ರೀ ಅನಂತಕುಮಾರ್‌ರವರು ತಮ್ಮ ಜೀವಿತಾವಧಿಯಲ್ಲಿ ದೇಶ, ರಾಜ್ಯ ಮತ್ತು ಬೆಂಗಳೂರಿನ ಅಭಿವೃದ್ಧಿಯಲ್ಲಿ ಸಲ್ಲಿಸಿದ ಸೇವೆ ಚಿರಸ್ಮರಣೀಯ. ಅವರ ಜೀವನದುದ್ದಕ್ಕೂ ಸಮಾಜಮುಖಿ ಸೇವೆಗೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಲಾಲ್‌ಬಾಗ್ ಪಶ್ಚಿಮ ದ್ವಾರದ ಎದುರು ಇರುವ ಟ್ರಾಫಿಕ್ ಐಲ್ಯಾಂಡ್ ನಲ್ಲಿ ನಿರ್ಮಾಣಗೊಳ್ಳುತ್ತಿರುವ ಶ್ರೀ ಅನಂತಕುಮಾರ ಸ್ಮಾರಕದ ಕೆಲಸವನ್ನು ಶೀಘ್ರವಾಗಿ ಪೂರ್ಣಗೊಳಿಸುವ ಬಗ್ಗೆ ಚರ್ಚಿಸಲು 20 ಫೆಬ್ರವರಿ 2025 ರಂದು ಅನಂತ ಪ್ರೇರಣಾ ಕೇಂದ್ರದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ನೇತೃತ್ವದಲ್ಲಿ ಮಹತ್ವದ ಸಭೆಯನ್ನು ನಡೆಸಲಾಯಿತು.

ಒಳ್ಳೆಯ ಕೆಲಸ ಮಾಡಲು ಇಚ್ಛೆ ಪಟ್ಟವರಿಗೆ ಅಡ್ಡಿಗಳು ಹೊಸದೇನೂ ಅಲ್ಲ. ನಮ್ಮ ದೇಶದಲ್ಲಿ ಜನಪರವಾದ, ಹಿತಕರವಾದ ಯೋಜನೆಗಳು ಕ್ರಿಯಾಶೀಲಗೊಳ್ಳುವಾಗ ಕೆಲವು ಅಸೂಯೆಯ ಮತ್ತು ಅಜ್ಞಾನದ ಶಕ್ತಿಗಳು ಅವುಗಳ ಮೇಲೆ ಗದಾಪ್ರಹಾರ ಮಾಡಲು ಮುಂದಾಗುತ್ತವೆ. ಇಂತಹ ಶಕ್ತಿಗಳು ಹೊಸದೇನಲ್ಲ. ಭಾರತ ಇತಿಹಾಸದಲ್ಲೇ ದೇಶಪ್ರೇಮಿಗಳ ವಿರುದ್ಧ ದ್ರೋಹ ಮಾಡಿದ ಅನೇಕ ಉದಾಹರಣೆಗಳು ನಮಗೆ ಗೊತ್ತಿವೆ. ಪರಕೀಯರೊಂದಿಗೆ ಕೈಜೋಡಿಸಿ ದೇಶದ ಸಂಸ್ಕೃತಿಗೆ ಧಕ್ಕೆ ತಂದವರೂ ಇದ್ದರು. ಬ್ರಿಟಿಷರ ಕಾಲದಲ್ಲೂ ಸ್ವಾತಂತ್ರ್ಯ ಹೋರಾಟಗಾರರನ್ನು ಬಲಿಪಶುವಾಗಿಸಿದ್ದೂ ಇದೇ ಬಗೆಯ ಜನರೇ. ವಿವಾದಗಳನ್ನು ಸೃಷ್ಟಿ ಮಾಡಿ ತನ್ನ ಕುದುರೆ ಓಡಿಸುವುದು ಹೇಗೆ, ಮುಂದೆ ತರುವುದು ಹೇಗೆ ಎಂಬ ಚಿಂತೆಯೇ ಹೊರತು ಸಮಾಜದ ಮೇಲೆ ಆಗುವ ದೂರಗಾಮಿ ಪರಿಣಾಮ ಏನು ಎಂದು ಯೋಚಿಸುವುದಿಲ್ಲ. ಬರೀ ತಮ್ಮ ಸ್ವಾರ್ಥದ ರಾಜಕಾರಣ ನಡೆಸುವುದು ಸಾಮಾನ್ಯವಾಗಿದೆ. ಇದೇ ತರಹದ ಒಂದು ವಿವಾದವನ್ನು ಲಾಲ್‌ಬಾಗ್ ಪಶ್ಚಿಮ ದ್ವಾರದ ಎದುರು ಬೆಂಗಳೂರು ಮಹಾನಗರ ಪಾಲಿಕೆಯು ನಿರ್ಮಾಣ ಮಾಡುತ್ತಿರುವ ಸ್ಮಾರಕದ ಕೆಲಸಕ್ಕೆ ಅಡ್ಡಿ ಮಾಡುವ ಪ್ರಯತ್ನ ನಡೆಯುತ್ತಿದೆ.

ಪುಟ 4 ರಲ್ಲಿ ಮುಂದುವರಿದಿದೆ

## ಭಾರತೀಯ ಸಂಸ್ಕೃತಿ ಉತ್ಸವ

ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಭಾರತ್ ವಿಕಾಸ ಸಂಗಮ ಮತ್ತು ವಿಕಾಸ ಅಕಾಡೆಮಿ ವತಿಯಿಂದ ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಬೀರನಹಳ್ಳಿಯ ಪ್ರಕೃತಿ ನಗರದಲ್ಲಿ ಆಯೋಜಿಲಾದ ಏಳನೇ ಭಾರತೀಯ ಸಂಸ್ಕೃತಿ ಉತ್ಸವ ಮತ್ತು ಸ್ವರ್ಣ ಜಯಂತಿ ಕಾರ್ಯಕ್ರಮದ ಉದ್ಘಾಟನೆಯನ್ನು ಫೆಬ್ರವರಿ 29ರಂದು ಭಾರತದ ಮಾಜಿ ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದ್ ನೆರವೇರಿಸಿದರು.

ಭಾರತೀಯ ಸಂಸ್ಕೃತಿ-7 ಉತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, “ನಮ್ಮ ಸಂಸ್ಕೃತಿಯಲ್ಲಿ ಸರ್ವೇ ಜನಾಃ ಸುಖಿನೋ ಭವಂತು ಎಂಬ ಮಾತಿದೆ. ಎಲ್ಲರಿಗೂ ಒಳ್ಳೆಯ ಗಾಳಿ ಒಳ್ಳೆಯ ಆಹಾರ, ಒಳ್ಳೆಯ ಶಿಕ್ಷಣ, ಸಮಾನ ಅವಕಾಶಗಳು ಸಿಗಬೇಕೆಂದರೆ ಸಮಾಜದಲ್ಲಿ ನಾವೇನು ಮಾಡಬೇಕು ಎಂಬುದನ್ನು ತಿಳಿದು ಅದಕ್ಕೆ ನಾವು ಉತ್ತರ ಕಂಡುಕೊಳ್ಳಬೇಕು, ಪರಿಸರಕ್ಕಾಗಿ ನಾವು ಮಾಡುವ ನಮ್ಮ ಸಣ್ಣಸಣ್ಣ ಬದಲಾವಣೆಗಳು ಸಮಾಜದಲ್ಲಿ ದೊಡ್ಡ ಪರಿವರ್ತನೆಗೆ ಕಾರಣವಾಗಬಹುದು” ಎಂದರು. ಲಕ್ಷಾಂತರ ಜನರು ಸೇರುವ ಈ ಕಾರ್ಯಕ್ರಮದಲ್ಲಿ ಅದಮ್ಯಚೇತನದ ಪ್ಲೇಟ್ ಬ್ಯಾಂಕ್ ಯೋಜನೆ ಬಳಕೆಯಾಗುತ್ತಿರುವುದಕ್ಕೆ ಅವರು ಸಂತಸ ವ್ಯಕ್ತಪಡಿಸಿದರು. ನಮ್ಮ ಅಗಾಧ ಸಂಸ್ಕೃತಿ, ಪರಂಪರೆ, ಐತಿಹ್ಯಗಳನ್ನು ಜನತೆಗೆ ಪರಿಚಯಿಸುವ ಉತ್ಸವದ ಆಯೋಜನೆಗೆ ಪ್ರಧಾನ ಸಂಯೋಜಕರಾದ ಶ್ರೀ ಬಸವರಾಜ್ ಪಾಟೀಲ್ ಸೇಡಂ ಮತ್ತು ಭಾರತ ವಿಕಾಸ್ ಸಂಗಮದ ಸಂಸ್ಥಾಪಕರಾದ ಶ್ರೀ ಕೆ. ಎನ್. ಗೋವಿಂದಾಚಾರ್ಯ ಅವರ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



### ನೂತನ ಮುಖ್ಯಮಂತ್ರಿಯವರಿಗೆ ಅಭಿನಂದನೆ



ದೆಹಲಿಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಶ್ರೀಮತಿ ರೇಖಾ ಗುಪ್ತಾ ಅವರಿಗೆ ಅನಂತಕುಮಾರ್ ಪ್ರತಿಷ್ಠಾನದಪರವಾಗಿ ಹೃತ್ಪೂರ್ವಕ ಶುಭಾಶಯಗಳು.

ಶ್ರೀ ಅನಂತಕುಮಾರರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ, ಶ್ರೀಮತಿ ರೇಖಾ ಗುಪ್ತಾ ದೆಹಲಿಯ ಚುನಾಯಿತ ಸದಸ್ಯೆಯಾಗಿದ್ದರು.

ಪುಟ 7 ರಲ್ಲಿ ಮುಂದುವರಿದಿದೆ

**ಮಾತೃ ಸಮಾವೇಶ**:ಜನ್ಮ ನೀಡಿದ ತಾಯಿ ಮತ್ತು ಮಾತೃಭೂಮಿ ಎಂಬ ಪದಗಳಲ್ಲಿ ಅಪಾರ ಶಕ್ತಿ ಇದೆ. “ಮಗು” ಎಂಬ ಶಬ್ದವು ತಾಯಿಯ ಅಪಾರ ಪ್ರೀತಿ ಮತ್ತು ಶ್ರದ್ಧೆಯನ್ನು ತೋರುತ್ತದೆ. ತಾಯಿ ಮತ್ತು ಮಗುವಿನ ಈ ಪವಿತ್ರ ಸಂಬಂಧವು ಕುಟುಂಬ, ದೇಶ, ಜಗತ್ತು ಮತ್ತು ಬ್ರಹ್ಮಾಂಡದ ಗೌರವವನ್ನು ಒಳಗೊಂಡಿದೆ. ತಾಯಿಯ ಪ್ರಭಾವದಿಂದ ಮಕ್ಕಳು ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬಹುದೆಂಬ ಉದ್ದೇಶದಿಂದ ಮಾತೃ ಸಮಾವೇಶ ಆಯೋಜಿಲಾಗಿತ್ತು. ಈ ಸಮಾವೇಶದ ಮುಖ್ಯ ವೇದಿಕೆಯಲ್ಲಿ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಶ್ರೀಮತಿ ದಾಕ್ಷಾಯಣಿ ಅಮ್ಮಾ ಮತ್ತು ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮಕ್ಕಳಿಗೆ ಕೈತುತ್ತು ತಿನ್ನಿಸುವ ಮೂಲಕ ಮಾತೃ ಸಮಾವೇಶ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 40 ಸಾವಿರ ತಾಯಂದಿರು ಭಾಗವಹಿಸಿದ್ದರು, 50 ಸಾವಿರಕ್ಕೂ ಹೆಚ್ಚು ಮಕ್ಕಳು ಅವರ ಕೈತುತ್ತಿನ ಊಟ ಸವಿದರು.



# ಬಸ್ತಿಹಳ್ಳಿಯ ಕೇದಾರೇಶ್ವರ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್



ಹಳೇಬೀಡು- ಸಾವಿರ ವರುಷಗಳ ಹಿಂದೆ ಹೊಯ್ಸಳರಾಜಧಾನಿಯಾಗಿದ್ದ ದ್ವಾರಸಮುದ್ರ ಎಂಬ ನಗರಿಯಾಗಿತ್ತು ಎಂದಮೇಲೆ ಹೇಳುವುದೇನು? ಹೊಯ್ಸಳ ಶಿಲ್ಪಕಲೆಯ ಸೊಬಗುಬೆಡಗನ್ನೆಲ್ಲ ಸೂರೆಗೊಂಡ ಹೊಯ್ಸಳೇಶ್ವರ ದೇವಾಲಯ ಜಗತ್ಪ್ರಸಿದ್ಧ ಪುರಾತನ ನಿರ್ಮಿತಿಗಳಲ್ಲೊಂದು. ಈ ಗುಡಿಯನ್ನು ನೋಡಿದವರೆಲ್ಲ ವಿಸ್ಮಯಭಾವ ತಗ್ಗುವ ಮುನ್ನವೇ ಇಷ್ಟೇ ಮಹತ್ವದ ಕಲೆಯ ಬಲೆ ಬೇಲೂರಿನತ್ತ ಧಾವಿಸಿಬಿಡುತ್ತಾರೆ. ಅವರಿಗೆಲ್ಲ ತಾವು ಕಳೆದುಕೊಂಡಿದ್ದೇನು ಎಂಬ ಪರಿವೆಯೂ ಇರದು. ನನ್ನ ಮಾತಿನ ಅರ್ಥವೇನೆಂದು ಕೇಳುತ್ತೀರಾ? ಹಾಗೆ ಓಡುವ ಮುನ್ನ ಹಳೇಬೀಡಿನಲ್ಲೇ ಕ್ಷಣಕಾಲ ನಿಲ್ಲುವಷ್ಟು ಸಾವಧಾನತೆ ತೋರಿದರೆ ಗೊತ್ತಾಗುತ್ತದೆ. ಹಳೇಬೀಡಿನ ಹೊಯ್ಸಳೇಶ್ವರ ಗುಡಿಯ ಹಿಂಭಾಗಕ್ಕೆ ಹೊರಳುವ ರಸ್ತೆಯತ್ತ ಬನ್ನಿ. ಅಲ್ಲೇ ಅರ್ಧ ಕಿಲೋಮೀಟರ್ ದೂರದಲ್ಲಿದೆ- ಬಸ್ತಿಹಳ್ಳಿ. ಹಳ್ಳಿಯ ಮನೆಗಳನ್ನು ದಾಟಿ ಸಾಗಿದರೆ ಕಾಣುವ ಪುರಾತನ ಕಟ್ಟಡಗಳೇ ಹೊಯ್ಸಳ ಅರಸರು ಕಟ್ಟಿಸಿದ ಪಾರ್ಶ್ವನಾಥ, ಆದಿನಾಥ ಮತ್ತು ಶಾಂತಿನಾಥ ತೀರ್ಥಂಕರರ ಬಸದಿಗಳು. ಈ ಭವ್ಯ ಕಟ್ಟಡಗಳನ್ನು ನೋಡಿಕೊಂಡು ಅದೇ ರಸ್ತೆಯಲ್ಲಿ ಮುಂದುವರೆಯಿರಿ. ಇದೀಗ ನಿಮ್ಮ ಎದುರಿಗೆ ಗೋಚರವಾಗುವ ಭವ್ಯ ಶಿಲಾದೇಗುಲವೇ ಕೇದಾರೇಶ್ವರ ದೇವಾಲಯ.



ಕ್ರಿ.ಶ. ೧೧೭೨ ರಿಂದ ೧೨೨೦ರವರೆಗೆ ಹೊಯ್ಸಳ ಸಾಮ್ರಾಜ್ಯವನ್ನು ಆಳಿದ ಎರಡನೆಯ ವೀರಬಲ್ಲಾಳ ಮತ್ತವನ ರಾಣಿ ಕೇತಲದೇವಿಯವರು ಈ ದೇವಾಲಯವನ್ನು ಕಟ್ಟಿಸಿದರಂತೆ. ವಾಸ್ತವವಾಗಿ, ಹೊಯ್ಸಳ ಕಾಲದಲ್ಲಿ ಕಟ್ಟಲಾದ ದೇವಾಲಯಗಳಲ್ಲಿ ಹೆಚ್ಚಿನವು ವೀರಬಲ್ಲಾಳನ ಕಾಲದಲ್ಲೇ ನಿರ್ಮಿತವಾದವು. ಮುನ್ನ ನಕ್ಷತ್ರಾಕಾರದ ಗೋಪುರವನ್ನು ಹೊಂದಿದ್ದ ಈ ದೇವಾಲಯದ ಕಟ್ಟಡ ಹಾಳಾಗಿ ಕುಸಿದ ಪರಿಣಾಮ ಗೋಪುರ ಕಣ್ಮರೆಯಾಗಿದೆ. ಮೂರು ಕೋಣೆಗಳುಳ್ಳ ಗರ್ಭಗುಡಿಯಿದ್ದರೂ ಮೂಲದೇವರಿಲ್ಲ. ಇಷ್ಟಾದರೂ, ಪುರಾತತ್ವ ಇಲಾಖೆಯ ರಕ್ಷಣೆಗೊಳಪಟ್ಟು ಸುಸ್ಥಿತಿಯಲ್ಲಿರುವ ಕೇದಾರೇಶ್ವರ ದೇವಾಲಯ ಮೊದಲ ನೋಟಕ್ಕೇ ನಿಮ್ಮ ಕಣ್ಸೆಳೆಯುತ್ತದೆ. ಎತ್ತರವಾದ ಜಗತಿ. ಅದರ ಮೇಲೆ ಆರೇಳು ಹಂತದ ಅಲಂಕಾರ ಪಟ್ಟಿಕೆಗಳು. ಮೇಲಿನಿಂದ ಗಮನಿಸುತ್ತ ಬಂದರೆ ಮೊದಲು ಹಂಸಗಳ ಸಾಲು, ಆಮೇಲೆ, ಮಕರ ಎಂದರೆ ಮೊಸಳೆಗಳು,ಮಕರಗಳ ಮೇಲೆ ಕುಳಿತ ದೇವಗಣಗಳು. ಮೂರನೆಯ ಸಾಲಿನಲ್ಲಿ ರಾಮಾಯಣ, ಮಹಾಭಾರತದ ದೃಶ್ಯಗಳು. ಮುಂದೆ ಹೂಬಳ್ಳಿಗಳು. ಈ ಬಳ್ಳಿಗಳೊಳಗೆ ಅಲ್ಲಲ್ಲಿ ಸಂಗೀತನೃತ್ಯಗಾರರ ಚಿತ್ರಗಳು. ಆಮೇಲೆ ಸಿಂಹಗಳ ಸಾಲು, ಮತ್ತೆ ಪುಷ್ಪವಲ್ಲರಿಗಳು. ತಳಸಾಲಿನಲ್ಲಿ ಗಜಪಂಕ್ತಿ. ತೀರಾ ಚಿಕ್ಕ ಪಟ್ಟಿಕೆಯ ಮೇಲೆ ಮೂಡಿದ ರಾಕ್ಷಸ-ವಾನರರ ಯುದ್ಧದೃಶ್ಯಗಳು, ಪ್ರಹ್ಲಾದನ ಭಕ್ತಿ, ಭೀಷ್ಮನ ಶರಶಯ್ಯೆ, ದೇವಾಸುರರ ಸಮುದ್ರಮಥನ ಮೊದಲಾದ ಪುರಾಣಕಥೆಗಳು ಬೆರಗುಹುಟ್ಟಿಸುವಂತಿವೆ.


ಅಲಂಕಾರ ಪಟ್ಟಿಕೆಗಳ ಮೇಲೆ ಎರಡು ಹಂತದ ಶಿಲ್ಪಭಿತ್ತಿ. ಮೊದಲ ಭಾಗದಲ್ಲಿ ಹೊಯ್ಸಳಶಿಲ್ಪಕಲಾ ಪ್ರೌಢಿಮೆಯನ್ನು ಮೆರೆಸುವ ಉತ್ಕೃಷ್ಟ ಶಿಲ್ಪಗಳು. ಅದರ ಮೇಲಕ್ಕೆ ಕಿರುಕಂಬಗಳು, ಗೋಪುರಗಳು. ಮೇಲಕ್ಕೆ ಹೊರಚಾಚಿಕೊಂಡತಿರುವ ಛಾವಣಿ. ಕೈಪಿಡಿ ಬರಿದಾಗಿದ್ದು ಪೂರ್ವಕಾಲದಲ್ಲಿ ಸೂರಿನ ಮೇಲುಭಾಗದ ಅಂಚಿನ ಮೇಲೆ ಯಾವ ಶಿಲ್ಪರಚನೆಯಿತ್ತೋ ತಿಳಿಯದು. ಭಿತ್ತಿಯ ಮೇಲಿನ ಶಿಲ್ಪಗಳು ದೇವಾಲಯದ ಸುತ್ತಲೂ ಎಡೆಬಿಡದೆ ಕಿಕ್ಕಿರಿದಿರುವುದೇ ಕಣ್ಣಿಗೊಂದು ಹಬ್ಬ.


ಹೊಯ್ಸಳ ಶಿಲ್ಪಗಳನ್ನು ಅಭ್ಯಾಸಮಾಡುವುದಕ್ಕೂ ಸರಳ ಪರಿಚಯವನ್ನು ಪಡೆಯುವುದಕ್ಕೂ ಈ ಕೇದಾರೇಶ್ವರ ಗುಡಿ ಒಳ್ಳೆಯ ಮಾದರಿಗಳನ್ನು ಒದಗಿಸುತ್ತದೆ. ಈ ದೇವಾಲಯವು ಶೈವಪೂಜಾಸ್ಥಾನವಾದರೂ ವಿಷ್ಣುವಿನ ರೂಪಗಳನ್ನು ಪ್ರದರ್ಶಿಸುತ್ತದೆ. ಶೈವ-ವೈಷ್ಣವ ಸಾಮರಸ್ಯವನ್ನು ಕಾಪಾಡಲು ಹೊಯ್ಸಳರು ತೋರಿದ ಪ್ರಾಮಾಣಿಕ ಕಾಳಜಿಗೆ ಇದು ಸಂಕೇತ. ವಿಷ್ಣುವಿನ ಇಪ್ಪತ್ನಾಲ್ಕು ರೂಪಗಳು, ಬಲಿಯಿಂದ ದಾನಪಡೆದ ವಾಮನ, ತ್ರಿವಿಕ್ರಮ ರೂಪ, ವರಾಹಾವತಾರಿ ವಿಷ್ಣು, ಲಕ್ಷ್ಮೀನಾರಾಯಣ, ಕಾಳಿಂಗ ಗಮರ್ದನ, ವೇಣುಗೋಪಾಲ, ಗೋವರ್ಧನಗಿರಿಧಾರಿ ಮತ್ತಿತರ ಶ್ರೀಕೃಷ್ಣನ ಲೀಲೆಗಳೂ ಈ ದೇಗುಲದ ಭಿತ್ತಿಯ ಮೇಲೆ ಶಿಲ್ಪರೂಪಗಳಲ್ಲಿ ಪ್ರಕಟವಾಗಿವೆ.

ಇನ್ನು ಶಿವನ ಲೀಲಾವಿನೋದದ ಶಿಲ್ಪಗಳೂ ಅನೇಕವಾಗಿವೆ. ನಂದಿಯ ಮೇಲೆ ಕುಳಿತ ಶಿವಪಾರ್ವತಿ, ನಾಟ್ಯಶಿವ, ಗಜಾಸುರ ಸಂಹಾರ, ಭೈರವ, ವೀರಭದ್ರ, ಕಂಕಾಲಮೂರ್ತಿ ಮೊದಲಾದ ರೂಪಗಳು ಇಲ್ಲಿ ಸುಂದರವಾಗಿ ಶಿಲಾರೂಪು ತಾಳಿವೆ. ಮಹಿಷಮರ್ದಿನಿ, ದುರ್ಗೆ, ನಾಟ್ಯಸರಸ್ವತಿ, ಭೈರವಿ, ಲಕ್ಷ್ಮೀ, ಬ್ರಹ್ಮ, ನಾಟ್ಯಗಣಪತಿ ಮೊದಲಾದ ದೇವತೆಯರೂ ಕಂಡುಬರುತ್ತಾರೆ. ಉಳಿದ ಹೊಯ್ಸಳಗುಡಿಗಳಲ್ಲಿ ಕಂಡುಬರುವ ಶಿಲಾಸುಂದರಿಯರು, ಸಂಗೀತನೃತ್ಯಗಾರರು, ವಿಷಕನ್ಯೆ ಮತ್ತವಳ ಸಹಚರ ಐಂದ್ರಜಾಲಿಕ, ಅರ್ಜುನನ ಮತ್ಸ್ಯಭೇಧನ, ಗರುಡ, ಕೈಲಾಸಪರ್ವತವೆತ್ತಿದ ರಾವಣ- ಮೊದಲಾದ ಶಿಲ್ಪಗಳನ್ನೂ ನೋಡಬಹುದು. ಇನ್ನಾದರೂ ಹಳೇಬೀಡಿಗೆ ಬಂದವರು ಹೊಯ್ಸಳಶಿಲ್ಪವೈಭವವನ್ನು ಮೆರೆಸುವ ಈ ದೇಗುಲವನ್ನು ನೋಡುವ ಅವಕಾಶವನ್ನು ಕಳೆದುಕೊಳ್ಳದಿರಿ. ◆

**ಸೌಜನ್ಯ : ಆಕಾಶವಾಣಿ, ಮೈಸೂರು**







# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

ಅಧ್ಯಾಯ-31

# ಹೋರಾಟಕ್ಕೆ ಸಿದ್ಧತೆ



ಕೃಪೆ: Footer AI

೧೯೭೫ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ನರಹರಿ ಫಡಕೆ ಹುಬ್ಬಳ್ಳಿಯಲ್ಲಿದ್ದುದು ಕೇವಲ ಆಕಸ್ಮಿಕವೇನೂ ಅಲ್ಲ. ಕಾರವಾರದ ಪಾಲಿಟೆಕ್ನಿಕ್‌ನಿಂದ ಅವರನ್ನು ಹುಬ್ಬಳ್ಳಿಯ ತಾಂತ್ರಿಕ ಶಾಲೆಗೆ ವರ್ಗಮಾಡಲಾಗಿತ್ತು. ಎಳೆತನದಿಂದಲೂ ರಾಷ್ಟ್ರೀಯ ಸ್ವಯಂಸೇವಕಸಂಘದ ಚಟುವಟಿಕೆಗಳೊಂದಿಗೆ ತಳುಕು ಹಾಕಿಕೊಂಡಿದ್ದ ನರಹರಿ ಫಡಕೆಯವರ ಜೀವನದಲ್ಲಿ ಹುಬ್ಬಳ್ಳಿಯ ವಾಸವೂ ಸಂಘಕ್ಕೆ ಸಂಬಂಧಿಸಿದ ಇನ್ನೊಂದು ಅಧ್ಯಾಯವೇ.

ತುರ್ತು ಪರಿಸ್ಥಿತಿ ಎಂದಮೇಲೆ ಕೇಳಬೇಕೇ! ಎಲ್ಲೆಡೆ ಭಯದ ವಾತಾವರಣ. ಸಂಘದ ಚಟುವಟಿಕೆಗಳಿರಲಿ, ಸಂಘವನ್ನೇ ನಿಷೇಧಿಸಲಾಗಿತ್ತು. ನರಹರಿ ಫಡಕೆಯವರೋ ತಮ್ಮ ವಾಸ್ತವ್ಯಕ್ಕೆ ಸಂಘದ ಕಚೇರಿಯನ್ನೇ ಆಯ್ದುಕೊಂಡುಬಿಟ್ಟಿದ್ದರು. ಯಾರಾದರೂ ಕೇಳಿದರೆ ತಾನು ಊರಿಗೆ ಹೊಸಬ, ಆ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇನೆ ಎಂದರಾಯಿತಲ್ಲ. ತಾವು ಉದ್ಯೋಗದಲ್ಲಿದ್ದ ತಾಂತ್ರಿಕ ಶಾಲೆಯವರಿಗೆ ಫಡಕೆಯವರು ತಾನು ಬಹಳ ದಿನ ಈ ನೌಕರಿಯಲ್ಲಿ ಉಳಿಯಲಿಕ್ಕಿಲ್ಲ, ಆದ್ದರಿಂದ ತನಗೆ ತುಂಬ ಜವಾಬ್ದಾರಿಯಿರುವ ಕೆಲಸ ಕೊಡಬಾರದೆಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರು, ಒಂದು ರೀತಿಯಲ್ಲಿ ಶಾಲೆಯಲ್ಲಿ ಇದ್ದಷ್ಟು ಹೊತ್ತು ವಿಶ್ರಾಂತಿಯಲ್ಲಿರುತ್ತಿದ್ದ ಫಡಕೆಯವರ ಕೆಲಸ ಶುರುವಾಗುತ್ತಿದ್ದುದೇ ಸಂಜೆಯ ನಂತರ. ಸರ್ಕಾರಿ ಕೆಲಸದಲ್ಲಿದ್ದ ಫಡಕೆಯವರು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆಂದು ಯಾವಾಗಲೂ ಆಸುಪಾಸಿನಲ್ಲೇ ತಿರುಗುವ ಪೋಲೀಸರಿಗೂ ಗೊತ್ತಾಗುವ ಹಾಗಿರಲಿಲ್ಲ.

ಸೆರೆಸಿಕ್ಕುವ ಅಪಾಯದಿಂದ ಪಾರಾಗಲು ಪರಿವಾರದವರೆಲ್ಲ ಭೂಗತರಾಗಿಬಿಟ್ಟಿದ್ದರು. ಪೋಲೀಸರಿರಲಿ, ಆಪ್ತರ ಕೈಗೇ ಸಿಕ್ಕುವವರಲ್ಲ. ಹೀಗಿರುವಾಗ ದೇಶದ ವಿದ್ಯಮಾನಗಳನ್ನೂ ಸಂಘದ ಭೂಗತ ಚಟುವಟಿಕೆಗಳನ್ನೂ ಸಾರ್ವಜನಿಕರಿಗೆ ಮುಟ್ಟಿಸುವ ಕೆಲಸಕ್ಕೆ ಫಡಕೆಯವರು ಸರ್ಕಾರದ ಸಂಶಯದ ಕಣ್ಣುಗಳಿಗೆ ಸಿಕ್ಕದ ಹುಡುಗರನ್ನು ಆರಿಸಿಕೊಳ್ಳಬೇಕಾಗಿತ್ತು. ಆಗ ಮೊದಲಿಗೆ ಸಹಾಯಕ್ಕೆ ಬಂದ ಅಚ್ಯುತ ಲಿಮಯೆ ಫಡಕೆಯವರ ಸೋದರಿಯ ಮಗನೇ. ಹುಬ್ಬಳ್ಳಿಯಲ್ಲೇ ಇದ್ದ ಅಚ್ಯುತ ಲಿಮಯೆ ಕಾಲೇಜಿನಲ್ಲಿ ಪಿ.ಯು. ಸಿ. ವ್ಯಾಸಂಗಮಾಡುತ್ತಿದ್ದ. ಆತ ತನ್ನ ಹಲವರು ಸಮಾನಮನಸ್ಕ ಗೆಳೆಯರನ್ನು ಜೊತೆಗೂಡಿಸಿ ಫಡಕೆಯವರಿಗೆ ಪರಿಚಯ ಮಾಡಿಸಿದ.

ಅಚ್ಯುತ ಲಿಮಯೆಯ ಗುಂಪಿನ ಸದಸ್ಯರಲ್ಲಿ ಅನಂತಕುಮಾರ್, ವಿಷ್ಣುಕಾಂತ ಚಟಪಲ್ಲಿ, ಗುಡ್ಡು ಇನಾಂದಾರ್, ಅನಿಲ್ ಸಹಸ್ರಬುದ್ಧೆ, ಪಾಂಡುರಂಗ ನಾಯಕ ಮೊದಲಾದವರಿದ್ದರು. ಎಲ್ಲರೂ ಕಾಲೇಜು ವಿದ್ಯಾರ್ಥಿಗಳೇ. ಎಲ್ಲ ಪಿಯುಸಿ ಆಸುಪಾಸಿನ ತರಗತಿಯವರೇ. ಅನಿಲ್ ಪ್ರಥಮ ವರ್ಷದ ಇಂಜಿನಿಯರಿಂಗ್ ತರಗತಿಯಲ್ಲಿದ್ದರೆ, ಪಾಂಡುರಂಗ ನಾಯಕ್ ವೈದ್ಯಕೀಯ ಕಾಲೇಜಿನ ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದ. ಹಾಗೆ ನೋಡಿದರೆ, ನರಹರಿ ಫಡಕೆಯವರಿಗೂ ಉಳಿದವರಿಗೂ ತಲೆಮಾರಿನ ವ್ಯತ್ಯಾಸವಂತೂ ಇರಲಿಲ್ಲ. ಫಡಕೆಯವರು ಇನ್ನೂ ಕಾನೂನು ಪದವಿಯ ಓದು ಸಾಗಿರುವಾಗಲೇ ಸರ್ಕಾರಿ ಕೆಲಸ ಸಿಕ್ಕಿದ್ದಕ್ಕೆ ಹೋಗಿ ಸೇರಿಕೊಂಡಿದ್ದರು.

ಸಹಾಯಕ್ಕೆ ಒಂದಿಷ್ಟು ಜನರು ಒದಗಿದರೂ ಗುಂಪು ಸೇರುವ ಹಾಗಿಲ್ಲ, ಎಲ್ಲರ ಕಣ್ಣಿಗೆ ಕಾಣುವಂತೆ ಚಟುವಟಿಕೆಯಲ್ಲಿ ತೊಡಗುವ ಹಾಗಿಲ್ಲ. ದುರ್ಗದಬೈಲಿನಲ್ಲಿ ದಿನವೂ ಸಂಜೆ ಎಲ್ಲರೂ ಸೇರುವುದೆಂದು ಗೊತ್ತುಪಡಿಸಿದ್ದಾಯಿತು. ಅಲ್ಲೊಂದು ರೇಣುಕಾ ಸ್ಟಾಲ್ ಎಂಬ ಹೆಸರಿನ ಅಂಗಡಿ. ಅಂಗಡಿಯಲ್ಲ, ದೂಡುವ ಗಾಡಿಗೆ ಅಂಗಡಿಯ ರೂಪ. ಹುಡುಗರ ಗುಂಪು ಸೇರುವುದಕ್ಕೆ ಕಾರಣ ಬೇಕಲ್ಲ. ಎರಡೋ ಮೂರೋ ಚುರುಮುರಿ ಕಟ್ಟಿಸುವುದು, ಅದನ್ನು ಎಂಟು ಹತ್ತು ಜನ ಪಾಲುಮಾಡಿಕೊಂಡು ತಿನ್ನುತ್ತಾ ದೇಶಸೇವೆಯ ಚರ್ಚೆ ಮಾಡುವುದು. ಅಂದರೆ, ತುರ್ತುಪರಿಸ್ಥಿತಿಯಿಂದ ದೇಶವನ್ನು ವಿಮೋಚನೆ ಗೊಳಿಸುವುದು ಹೇಗೆ, ತಮ್ಮ ಹೋರಾಟದ ರೂಪುರೇಷೆ ಹೇಗಿರಬೇಕು ಇವೇ ಮೊದಲಾದವು ಚರ್ಚೆಯ ವಿಷಯಗಳು. ಸದಸ್ಯರು ಇನ್ನೂ ಚಿಕ್ಕ ವಯಸ್ಸಿನವರಾದರೂ ಬಹು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಆದರೆ ಚುರುಮುರಿಯ ನೆಪ ಮಾಡಿಕೊಂಡು ದಿನನಿತ್ಯ ಬಹಿರಂಗವಾಗಿ ಸಭೆ ನಡೆಸುವುದು ಅಂದಿನ ಸಂದರ್ಭದಲ್ಲಿ ಕ್ಷೇಮಕರವಾಗಿರಲಿಲ್ಲ.

ಹೀಗಾಗಿ ಇನ್ನೂ ಹೆಚ್ಚಿನ ಗೆಳೆಯರ ಗುಂಪುಕಟ್ಟಿ ವಿವೇಕಾನಂದ ಅಸೋಸಿಯೇಶನ್ ಎಂಬ ಹೆಸರಿನ ಸಮೂಹವನ್ನು ರಚಿಸುವುದೆಂದು ತೀರ್ಮಾನಿಸಿದರು. ಸದಸ್ಯರು ಆಟವಾಡುವುದಕ್ಕಾಗಿ ಜೊತೆಸೇರುವರೆಂದು ತೋರ್ಪಡಿಸಲು ವಾಲಿಬಾಲ್ ನೆಟ್ ಒಂದನ್ನು ಕೊಂಡದ್ದಾಯಿತು. ವಾಲಿಬಾಲ್ ಆಡಿದ್ದು ಎರಡೇ ದಿನವಾದರೂ ಗುಂಪು ಸೇರುವುದಕ್ಕೊಂದು ನೆಪವಾಯಿತು. ಇವರೊಡನೆ ಉಮಾ ಮಹೇಶ್ವರ್, ವಾದೀಂದ್ರಾಚಾರ್ಯ ಮೊದಲಾದವರು ಸೇರಿ ಗುಂಪು ದೊಡ್ಡದೂ ಆಗುವಂತಾಯಿತು.

ಈ ಹುಡುಗರ ಪೋಷಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅವಶ್ಯಕವೆಂದು ಭಾವಿಸಿದ ನರಹರಿ ಫಡಕೆ ಅವರ ಮನೆಗಳಿಗೂ ಆಗಿಂದಾಗ್ಗೆ ಹೋಗಿ ಬರುತ್ತಿದ್ದರು. ಅನಂತಕುಮಾರ್ ಮತ್ತು ಅಚ್ಯುತ ಲಿಮಯೆಯವರ ಮನೆಗಳಲ್ಲಂತೂ ಫಡಕೆಯವರ ಪ್ರೋತ್ಸಾಹ, ಮಕ್ಕಳ ಪಾಲ್ಗೊಳ್ಳುವಿಕೆಗೆ ಸಂಪೂರ್ಣ ಬೆಂಬಲವಿತ್ತು. ಫಡಕೆಯವರು ತಮ್ಮ ಮಕ್ಕಳ ಹಿತೈಷಿಯೆಂಬುದನ್ನು ಒಪ್ಪಿದ ಕೆಲವು ಪೋಷಕರು, ಕಾಲ ಕೆಟ್ಟದಿದೆ. ನಮ್ಮ ಹುಡುಗರು ಹಾಳಾಗಿ ಹೋಗಿಬಿಟ್ಟಾರು, ಸ್ವಲ್ಪ ನೀವೇ ಬುದ್ಧಿ ಹೇಳಿ ನೋಡಿಕೊಳ್ಳಬೇಕು ಎಂದು ತಮ್ಮ ಮಕ್ಕಳ ಜವಾಬ್ದಾರಿಯನ್ನು ನರಹರಿ ಫಡಕೆಯವರಿಗೇ ಒಪ್ಪಿಸಿಕೊಟ್ಟು ನಿಶ್ಚಿಂತರಾಗಿದ್ದರು. ಹೀಗೆ ತಮಗೆ ದೊರೆತ ಹೊಣೆಗಾರಿಕೆಯು ಮಕ್ಕಳನ್ನು ಯುದ್ಧರಂಗಕ್ಕೆ ಸಜ್ಜುಗೊಳಿಸಲು ಪೋಷಕರಿಂದ ಸಿಕ್ಕ ಒಪ್ಪಿಗೆಯೆಂದೇ ಫಡಕೆಯವರು ಭಾವಿಸಿಕೊಂಡಿದ್ದರೆ ತಪ್ಪೇನು?

ಫಡಕೆಯವರು ರಾತ್ರಿ ಕುಳಿತುಕೊಂಡು ಸಿದ್ಧಪಡಿಸುತ್ತಿದ್ದ ಲೇಖನ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ವಿತರಿಸುವ ಕೆಲಸವನ್ನೂ ಇನ್ನಿತರ ಜವಾಬ್ದಾರಿಗಳನ್ನೂ ಅನಂತಕುಮಾರ್, ವಿಷ್ಣುಕಾಂತ ಚಟಪಲ್ಲಿ, ಅಚ್ಯುತ ಲಿಮಯೆ, ಪ್ರದೀಪ್ ಮುಜುಂದಾರ್ ಮೊದಲಾದವರೆಲ್ಲ ದಿನನಿತ್ಯ ಶ್ರದ್ಧೆಯಿಂದ ಮಾಡುತ್ತಿದ್ದರು. ಮರುದಿನ ತಾವು ವಹಿಸಿಕೊಂಡ ಕರ್ತವ್ಯ ನಿರ್ವಹಣೆಯ ಬಗೆಗೆ ವರದಿಯನ್ನೂ ಒಪ್ಪಿಸುತ್ತಿದ್ದರು.

೧೯೭೫ ನವೆಂಬರ್ ತಿಂಗಳ ಹೊತ್ತಿಗೆ ಸಂಘದ ವತಿಯಿಂದ ಸತ್ಯಾಗ್ರಹಕ್ಕೆ ಸಿದ್ಧತೆಗಳು ನಡೆದಿದ್ದವು. ನಿರ್ದಿಷ್ಟ ದಿನ ಜನಜಾಗೃತಿಗಾಗಿ ಸಭೆ ನಡೆಸಿ, ಮೆರೆವಣಿಗೆ ಹೊರಡಿಸುವುದು, ಪೋಲೀಸ್ ಬಂಧನಕ್ಕೆ ಒಳಗಾಗುವುದು, ಸೆರೆಮನೆಗೂ ಹೋಗಲು ಸಿದ್ಧವಾಗುವುದು ಈ ಸತ್ಯಾಗ್ರಹದ ಸ್ವರೂಪ. ನವೆಂಬರ್ ಹದಿನಾಲ್ಕರಂದು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ಸಭೆ ನಡೆಸಿ ಮೆರೆವಣಿಗೆ ಹೊರಡಿಸಿ ಹದಿನಾಲ್ಕು ಜನರ ಮೊದಲ ತಂಡ ಸೆರೆಮನೆಗೆ ಹೋಗುವುದೆಂದೂ ತೀರ್ಮಾನವಾಯಿತು. ಭೂಗತ ಹೋರಾಟಗಾರರೆಲ್ಲ ಕೈಗೆ ಸಿಕ್ಕದೆ ಅಡಗಿಕೊಂಡಿದ್ದರು. ಫಡಕೆಯವರ ಜೊತೆಗಿದ್ದ ಕಾಲೇಜು ಹುಡುಗರಷ್ಟೇ ಯುದ್ಧಕ್ಕೆ ಸಿದ್ಧರಾಗಿ ಮುನ್ನುಗ್ಗಲು ಕಾತರಿಸುತ್ತಿದ್ದವರು.

ಹೀಗಾಗಿ ಮೊದಲ ತಂಡಕ್ಕೆ ಹದಿನಾಲ್ಕು ಜನರನ್ನು ಕೂಡಿಸುವುದೇ ಕಷ್ಟವಾಯಿತು. ಅಂತೂ ಇಂತೂ ಹದಿಮೂರು ಜನರನ್ನು ಸಿದ್ಧಪಡಿಸಿದ್ದಾಯಿತು. ನವೆಂಬರ್ ಹದಿನಾಲ್ಕರಂದು ಸಭೆ ನಡೆದು ಮೆರೆವಣಿಗೆಯೂ ಹೊರಟಿತು. ಹದಿನಾಲ್ಕನೆಯವನು ಇಲ್ಲವಲ್ಲ ಎಂದು ಫಡಕೆ ಚಿಂತಿಸುತ್ತಿರುವಷ್ಟರಲ್ಲಿ ಪಲ್ಲಣ್ಣ ಕಾಣಿಸಿಕೊಂಡ.

ಈ ಪಲ್ಲಣ್ಣ ಎಂಬ ಅಡ್ಡಹೆಸರಿನ ಹುಡುಗ ಪ್ರಹ್ಲಾದ ಬಡಗಂಡಿ. ಸಂಘದ ಕಾರ್ಯಾಲಯಕ್ಕೆ ಸೇರಿದ ಒಂದು ಮನೆಯಲ್ಲಿ ಪಲ್ಲಣ್ಣನೂ ಅವನ ತಂದೆತಾಯಿಯೂ ಬಾಡಿಗೆಗಿದ್ದವರು. ಅವನು ಈ ಮುನ್ನ ಫಡಕೆಯವರು ಸತ್ಯಾಗ್ರಹದ ಮಾತು ಹೇಳುವಾಗ, ನೀವು ಯಾವಾಗ ಕರೆದರೂ ಬರುತ್ತೀನಿ ಎಂದಿದ್ದ. ಸರಿ, ಹದಿನಾಲ್ಕನೆಯವನು ಸಿಕ್ಕ ಸಂತೋಷದಲ್ಲಿ ಫಡಕೆಯವರು ತತ್‌ಕ್ಷಣ ಪಲ್ಲಣ್ಣನನ್ನು ಕರೆದರು. ಮೆರೆವಣಿಗೆ ಹುಬ್ಬಳ್ಳಿಯ ಸ್ಟೇಶನ್ ರೋಡ್ ತಲುಪುವ ಹೊತ್ತಿಗೆ ಸಾವಿರಾರು ಜನ ಸೇರಿದ್ದರು. ಪೋಲೀಸರೂ ಇದ್ದರು. ಆದರೆ ವಿದ್ಯಮಾನಗಳನ್ನು ದೂರದಿಂದ ನೋಡುತ್ತಿದ್ದರು.

ಪುಟ 4 ರಲ್ಲಿ ಮುಂದುವರಿದಿದೆ

# ಪ್ರೇರಣಾದಾಯೀ ಸ್ಮಾರಕಕ್ಕೂ ವಿವಾದವೇ?

ಪುಟ 1 ರಿಂದ

## ವಿವಾದ ಸೃಷ್ಟಿಸುವುದೇ ಕೆಲವರ ಉದ್ಯೋಗ

ಶ್ರೀ ಅನಂತಕುಮಾರ್ ಅವರ ಸ್ಮರಣೆಯಲ್ಲಿ ಸ್ಮಾರಕವೊಂದನ್ನು ಮಾಡಬೇಕೆಂದು ಆಗಿನ ಮಹಾನಗರ ಪಾಲಿಕೆ ಸದಸ್ಯರೆಲ್ಲ ಸೇರಿ ಜನವರಿ 2019 ರಂದು ನಿರ್ಣಯ ಮಂಡಿಸಿದರು. ಇದಕ್ಕೆ ಸಂಪೂರ್ಣವಾಗಿ ಬೆಂಬಲ ದೊರೆತು ಪಕ್ಷಾತೀತವಾಗಿ ಎಲ್ಲರೂ ಅನುಮೋದಿಸಿದರು. ಲಾಲ್‌ಬಾಗ್ ಪಶ್ಚಿಮ ದ್ವಾರದ ಎದುರು ಇರುವ ಟ್ರಾಫಿಕ್ ಐಲ್ಯಾಂಡ್ ನಲ್ಲಿ ಸ್ಮಾರಕ ಮಾಡುವದಾಗಿ ಅವಿರೋಧ ನಿರ್ಣಯ ಮಂಡಿಸಲಾಯಿತು. ತದನಂತರ ಬಿಬಿಎಂಪಿಯಿಂದ ಪತ್ರಿಕೆಯಲ್ಲಿ ಜಾಹೀರಾತು ನೀಡಿ, ವಿರೋಧ ಇದ್ದರೆ ತಮ್ಮ ವಿರೋಧವನ್ನು ವ್ಯಕ್ತ ಪಡಿಸಬೇಕಾಗಿ ಪ್ರಕಟಣೆಯಲ್ಲಿ ಹೇಳಲಾಗಿತ್ತು. ಯಾವುದೇ ಆಕ್ಷೇಪಣೆ ಬರಲಿಲ್ಲ ಎಂದು ಗುರುತಿಸಿ ದಾಖಲೆ ಮಾಡಲಾಯಿತು.

ಈ ಸ್ಮಾರಕವು ಅನಂತಕುಮಾರರ ಸಾಮಾನ್ಯ ಜನರ ಬಗ್ಗೆ ಹೊಂದಿರುವ ಪ್ರೀತಿ, ಬಡವರಿಗಾಗಿ ಅವರು ಮಾಡಿದ ಕೆಲಸಗಳು, ಬೆಂಗಳೂರಿಗೆ, ಕನ್ನಡ ನಾಡಿಗೆ, ಭಾರತಕ್ಕೆ ಅವರು ಮಾಡಿದ ಅಪರಿಮಿತ ಸೇವೆಯನ್ನು ದಾಖಲಿಸಿ ಯುವಜನಾಂಗಕ್ಕೆ ಪ್ರೇರಣೆ ಕೊಡುವಂತಾಗಬೇಕು ಮತ್ತು ಮಾದರಿ ಸ್ಮಾರಕ ನಿರ್ಮಾಣವಾಗಬೇಕೆಂದು ಎರಡು ಕೋಟಿ ರೂಪಾಯಿಗಳ ಅನುದಾನಕ್ಕೆ ಸರಕಾರ ಒಪ್ಪಿಗೆ ಕೊಟ್ಟಿತು, ನಂತರ ಅದನ್ನು 1.16 ಕೋಟಿಗೆ ಕಡಿತ ಮಾಡಲಾಯಿತು. ಲಾಲ್‌ಬಾಗ್ ಮುಂದಿರುವ ಈ ಸ್ಮಾರಕ ವಿನ್ಯಾಸಕ್ಕೆ ದೇಶದ ಅತ್ಯಂತ ಹಿರಿಯ ಆರ್ಕಿಟೆಕ್ಟ್ ಒಬ್ಬರನ್ನು ಕರೆಸಿ ಡಿಸೈನ್ ಮಾಡಿಸಲಾಯಿತು. 2021 ರಲ್ಲಿ ಕೆಲಸ ಪ್ರಾರಂಭ ಮಾಡಲಾಯಿತು.

ವಿವಾದವನ್ನು ಹುಟ್ಟುಹಾಕಲು ಕೆಲವು ಜನರು ಹೊಸ ಹೊಸ ಕಾರಣಗಳನ್ನೆತ್ತಿ ತರುವರು. ಈ ಭಾಗದಲ್ಲಿ ಸ್ಮಾರಕ ನಿರ್ಮಾಣದ ಕಾರ್ಯ ತ್ವರಿತಗೊಳ್ಳುತ್ತಿದಂತೆಯೇ ಕೆಲವು ಬಣಗಳು ಇದನ್ನು ತಡೆಯುವ ಹುನ್ನಾರ ನಡೆಸಲು ಮುಂದಾಗಿವೆ. ಅವರ ಉದ್ದೇಶ, ಈ ಕಾರ್ಯವನ್ನು ಮುಕ್ತಾಯಗೊಳಿಸಲು ಬಿಡದೆ, ನಿರಂತರ ಅಡ್ಡಿಗಳನ್ನು ಒಡ್ಡಿ ವಿಳಂಬ ಮಾಡುವುದೇ ಆಗಿದೆ. ಇವುಗಳ ಹಿಂದೆ, ನಿಜವಾದ ಕಾರಣಗಳಿಗಿಂತಲೂ ವೈಯಕ್ತಿಕ ಲಾಭಗಳ ಹಿನ್ನೆಲೆ ಹೆಚ್ಚು ಕಂಡುಬರುತ್ತದೆ.

ದುರದೃಷ್ಟವಶಾತ್ ಸ್ಥಳೀಯ ನಿವಾಸಿಯೊಬ್ಬರು ಇದು ನನ್ನ ತಾತ ದಾನ ಮಾಡಿದ ಜಾಗ. ಆದ್ದರಿಂದ ನಾನು ಹೇಳಿದ ಪ್ರತಿಮೆ ಇಡಬೇಕು ಎಂದು ಕೆಲಸಕ್ಕೆ ಅಡ್ಡಿ ಮಾಡಿ, ಅರ್ಧ ಕಟ್ಟಿದ ಸ್ಥಳದಲ್ಲಿ ಸಣ್ಣ ಪ್ರತಿಮೆ ಇಟ್ಟು ಫೋಟೋ ತೆಗೆದು ತೊಂದರೆ ಕೊಡಲು ಪ್ರಾರಂಭಿಸಿದರು.









### ಲಾಲ್‌ಬಾಗ್ ಪಶ್ಚಿಮ ದ್ವಾರ ಅನಂತ ಸ್ಮೃತಿವನದಲ್ಲಿ ನಿತ್ಯ ಅನ್ನದಾಸೋಹ

**2023ರ ನವೆಂಬರ್ 12 ರಂದು ಅನಂತಕುಮಾರರ ಪುಣ್ಯತಿಥಿಯ ದಿನದಂದು ಪ್ರತಿದಿನ ಬಡವರಿಗೆ ಉಚಿತ ಊಟ ಕೊಡುವ ಸೇವೆಯನ್ನು ಈ ಸ್ಥಳದಲ್ಲಿ ಅದಮ್ಯ ಚೇತನದಿಂದ ಪ್ರಾರಂಭಿಸಲಾಯಿತು. ಕಳೆದ ಒಂದೂವರೆ ವರ್ಷದಿಂದ ಪ್ರತಿದಿನ 200 ಕ್ಕೂ ಹೆಚ್ಚು ಜನರು ಊಟ ಮಾಡುತ್ತಿದ್ದಾರೆ.**

ಈ ರೀತಿಯ ಪ್ರತಿರೋಧಗಳು ಪ್ರಗತಿಯನ್ನು ತಡೆಹಿಡಿಯಲು ಹೊರಟರೂ, ಸಮಾಜದ ಜವಾಬ್ದಾರಿಯೇ ಅವುಗಳನ್ನು ನಿವಾರಿಸಿಕೊಂಡು ನಿಜವಾದ ಅಭಿವೃದ್ಧಿಯತ್ತ ಹೆಜ್ಜೆ ಹಾಕುವುದು ನಿಸ್ಸಂಶಯ. ಸಮಾಜ ಹಿತವನ್ನು ನಿಗ್ರಹಿಸಲು ಹೊರಟಿರುವವರ ವಿರುದ್ಧ ಪ್ರಾಮಾಣಿಕ ಪ್ರಯತ್ನಗಳಿಗೆ ಬೆಂಬಲ ನೀಡುವ ಜವಾಬ್ದಾರಿ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನ ಮೇಲೂ ಇದೆ. ಈ ಸ್ಮಾರಕ ನಮ್ಮ ಸಂಸ್ಕೃತಿ ಮತ್ತು ಇತಿಹಾಸವನ್ನು ಪ್ರತಿಬಿಂಬಿಸುವ ಒಂದು ಮುಖ್ಯ ಆಯಾಮವಾಗಲಿದ್ದು, ಇದನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲರೂ ಒಗ್ಗೂಡಬೇಕಾಗಿದೆ.

ಪೂರ್ವಭಾವಿ ಸಭೆಯಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಪಿ. ವಿ. ಕೃಷ್ಣ ಭಟ್, ಜಯನಗರದ ಶಾಸಕ, ಶ್ರೀ ಸಿ. ಕೆ. ರಾಮಮೂರ್ತಿ, ಬಿಜೆಪಿಯ ರಾಜ್ಯ ಪದಾಧಿಕಾರಿ ಶ್ರೀ ಸುಬ್ಬಣ್ಣ, ಮಾಜಿ ಮಹಾಪೌರರಾದ ಶ್ರೀ ಕಟ್ಟೆ ಸತ್ಯ, ಶ್ರೀ ಸದಾಶಿವ, ಶ್ರೀ ವೇದವ್ಯಾಸ್ ಭಟ್, ಶ್ರೀ ಧನರಾಜ್, ಶ್ರೀ ಸೋಮಶೇಖರ್, ಶ್ರೀ ನರೇಶ್, ಶ್ರೀ ಅಕ್ರಮ್ ಪಾಶಾ, ಶ್ರೀ ಚಿ. ನಾ. ರಾಮು, ಶ್ರೀ ವಿಷ್ಣುಕಾಂತ್ ಚಟಪಲ್ಲಿ, ಶ್ರೀ ಜಿ. ಎಂ. ಇನಾಂದಾರ್, ಅನಂತಕುಮಾರ್ ಅವರ ಅಭಿಮಾನಿ ಬಳಗ, ಪಕ್ಷದ ಕಾರ್ಯಕರ್ತ ಬಂಧುಗಳು ಮೊದಲಾದವರು ಉಪಸ್ಥಿರಿದ್ದರು. ◆

ಪುಟ 3 ರಿಂದ

# ಹೋರಾಟಕ್ಕೆ ಸಿದ್ಧತೆ

ಪಲ್ಲಣ್ಣ ನಾನೇನು ಮಾಡಬೇಕು ಎಂದು ಕೇಳಿದ. ಮಾಡೋದೇನು, ಇದೋ ಇಲ್ಲಿ ಹದಿನಾಲ್ಕು ಹಾರ ಇವೆ, ಎಲ್ಲರಿಗೂ ಒಂದೊಂದು ಹಾರ ಹಾಕಿ ನೀನೂ ಒಂದು ಹಾಕಿಕೋ ಎಂದರು ಫಡಕೆ. ಆಮೇಲೆ? ಎಂದ ಪಲ್ಲಣ್ಣನ ಪ್ರಶ್ನೆಗೆ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಬೇಕು ಎಂದು ಫಡಕೆ ಸಮಾಧಾನವಾಗಿ ಉತ್ತರಿಸಿದರು. ಉಳಿದವರಿಗೆ ಪಲ್ಲಣ್ಣ ಹಾರ ಹಾಕುವಾಗ ಫಡಕೆಯವರೇ ಪಲ್ಲಣ್ಣನಿಗೂ ಒಂದು ಹಾರ ಹಾಕಿದರು.

ಪಲ್ಲಣ್ಣನ ಕೈಯಲ್ಲಿ ಒಂದು ಪ್ಯಾಕೆಟ್ ಇದ್ದಿತು. ಅದನ್ನು ಫಡಕೆಯವರ ಕೈಗೆ ಒಪ್ಪಿಸಿದ ಪಲ್ಲಣ್ಣ, ತನ್ನ ತಂದೆಯವರಿಗಾಗಿ ಔಷಧ ತರುತ್ತಿದ್ದೆನೆಂದು ಹೇಳಿ ಅದನ್ನು ಮರೆಯದೆ ತನ್ನ ಮನೆಗೊಪ್ಪಿಸಿ ವಿಷಯವನ್ನು ತಾಯಿತಂದೆಗೆ ತಿಳಿಸುವಂತೆ ಕೇಳಿಕೊಂಡ. ದೂರದಿಂದ ಈ ದೃಶ್ಯವನ್ನು ನೋಡುತ್ತಿದ್ದ ಹೆಡ್ ಕಾನ್ಸ್ಟೇಬಲ್ ಶಿವಣ್ಣ, ಫಡಕೆಯವರೇ ನೀವು ಅವರ ಜೊತೆಗೆ ಸೇರಬೇಡಿ ಬರ್ರಿ ಈ ಕಡೆಗೆ ಎಂದು ಕೂಗತೊಡಗಿದ.

ಪಾಪ, ಸರ್ಕಾರಿ ನೌಕರ ಫಡಕೆ ಎಲ್ಲಿ ಜೈಲು ಸೇರಿ ಕೆಲಸ ಕಳೆದುಕೊಳ್ಳುತ್ತಾರೋ ಎಂಬ ಕಳವಳ ಅವನಿಗೆ. ಮಾತ್ರವಲ್ಲ, ಫಡಕೆಯವರು ಪಲ್ಲಣ್ಣನ ಮನೆಗೆ ಹೋಗುವ ಹೊತ್ತಿಗೆ ಅಲ್ಲಿಗೂ ಬಂದು ಪಲ್ಲಣ್ಣನ ತಂದೆಯವರೊಡನೆ, ನಿಮ್ಮ ಹುಡುಗನಿಗೆ ಸ್ವಲ್ಪವೂ ಬುದ್ಧಿಯಿಲ್ಲ. ಪಾಪ, ಈ ಫಡಕೆಯವರು ಅವನಿಗೆ ಎಷ್ಟೋ ಬುದ್ಧಿ ಹೇಳಿ ಕೈ ಹಿಡಿದು ಎಳೆದುಕೊಂಡು ಬರಲು ನೋಡಿದರು. ಅವನು ಕೈಬಿಡಿಸಿಕೊಂಡು ಹೊರಟೇ ಹೋದ. ಉಳಿದವರೂ ಅಷ್ಟೇ, ಫಡಕೆಯವರು ಕೈಹಿಡಿದು ಕರೆದರೂ ಬರಲಿಲ್ಲ ನೋಡಿ ಎಂದು ದೂರಿದ. ದೂರದಲ್ಲಿ ನಿಂತು ನೋಡುತ್ತಿದ್ದ ಶಿವಣ್ಣನಿಗೆ ಫಡಕೆಯವರು ಸತ್ಯಾಗ್ರಹದ ಮೆರೆವಣಿಗೆಗೆ ಹದಿನಾಲ್ಕು ಜನರನ್ನು ಸಜ್ಜುಗೊಳಿಸುತ್ತಿದ್ದ ರೀತಿ ಕಂಡದ್ದು ಬೇರೊಂದು ರೀತಿಯಲ್ಲೇ.

ಸೆರೆಮನೆಗೆ ಹೋಗಬೇಕಿದ್ದ ಎರಡನೇ ತಂಡಕ್ಕೆ ಯಾರೂ ಮುಂದೆ ಬರಲಿಲ್ಲ. ಇನ್ನೆರಡು ವಾರ ಹೀಗೆಯೇ ಕಳೆಯಿತು. ಮುಂದಿನ ತಂಡಕ್ಕೆ ಶ್ರೀಕಾಂತ ದೇಸಾಯಿ ಮತ್ತು ವಾದೀಂದ್ರ ಆಚಾರ್ಯ ಎಂಬ ಇಬ್ಬರು ವಿದ್ಯಾರ್ಥಿಗಳು ಮಾತ್ರವೇ ಸತ್ಯಾಗ್ರಹದ ಮೆರೆವಣಿಗೆ ಹೊರಟು ಪೋಲೀಸ್ ಬಂಧನಕ್ಕೆ ಒಳಗಾದರು. ಹದಿನಾಲ್ಕರ ಸಂಖ್ಯೆ ಎರಡಕ್ಕೆ ಇಳಿದಿತ್ತು. ತುರ್ತು ಪರಿಸ್ಥಿತಿ ಘೋಷಣೆಯಾಗುತ್ತಿದ್ದಂತೆಯೇ ಹುಬ್ಬಳ್ಳಿಯ ಭಾಗದಲ್ಲಿ ಅನೇಕರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಗಿತ್ತು. ಇನ್ನು ಉಳಿದವರೆಂದರೆ ಫಡಕೆಯವರು ಮತ್ತವರ ಕಾಲೇಜು ಹುಡುಗರ ಗುಂಪು. ಡಿಸೆಂಬರ್ ತಿಂಗಳ ತಂಡಕ್ಕೆ ಇವರೇ ಒಟ್ಟು ಹದಿನಾಲ್ಕು ಜನರು ಸಿದ್ಧರಾದರು. ◆

# ಐಐಇಎಸ್‌ಟಿ, ಶಿಬ್‌ಪುರ- ಭವಿಷ್ಯದತ್ತ ಮಹತ್ತರ ಹೆಜ್ಜೆ: "ಶೈಕ್ಷಣಿಕ ಮತ್ತು ಸಂಶೋಧನಾ ಪ್ರಗತಿಯ ಸ್ಮರಣಿಕೆ" ಬಿಡುಗಡೆ



ಭಾರತೀಯ ಇಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (IIEST), ಶಿಬ್‌ಪುರವು ತನ್ನ ಭವಿಷ್ಯದ ದೃಷ್ಟಿಯತ್ತ ಮಹತ್ತರ ಹೆಜ್ಜೆ ಹಾಕಿದೆ. ಫೆಬ್ರವರಿ 5, 2025 ರಂದು ಸಂಸ್ಥೆಯ ಆಡಳಿತ ಮಂಡಳಿಯ (BOG) ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ನಿರ್ದೇಶಕ ಪ್ರೊ. ವಿ.ಎಂ.ಎಸ್.ಆರ್. ಮೂರ್ತಿ ಅವರು ಮಾನ್ಯ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿಯಾಗಿ, ಸಂಸ್ಥೆಯ ಅಭಿವೃದ್ಧಿ ಪಠ್ಯಕ್ರಮ, ಶೈಕ್ಷಣಿಕ, ಸಂಶೋಧನಾ ಮುಂದುವರಿಕೆ ಹಾಗೂ ಭವಿಷ್ಯದ ಗುರಿಗಳ ಬಗ್ಗೆ ಚರ್ಚಿಸಿದರು.

ಈ ಮಹತ್ವದ ಸಭೆಯ ಸಂದರ್ಭದಲ್ಲಿ, ಶೈಕ್ಷಣಿಕ ಮತ್ತು ಸಂಶೋಧನಾ ಪ್ರಗತಿಯ ಬಗ್ಗೆ ಸ್ಮರಣಿಕೆಯ ಸಂಕಲನ ಬಿಡುಗಡೆ ಮಾಡಲಾಯಿತು. ಈ ಸಂಸ್ಥೆಯು 1856 ರಲ್ಲಿ ಸ್ಥಾಪನೆಯಾಗಿದ್ದು, ಭಾರತದ ಎರಡನೇ ಅತೀ ಹಳೆಯ ಇಂಜಿನಿಯರಿಂಗ್ ಸಂಸ್ಥೆಯಾಗಿ 168 ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಈ ಸಂಕಲನವು ಸಂಸ್ಥೆಯ ಪ್ರಸ್ತುತ ಮತ್ತು ಭವಿಷ್ಯದ ಯೋಜನೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒಳಗೊಂಡಿದೆ, ಇದು ರಾಷ್ಟ್ರದ ಶೈಕ್ಷಣಿಕ ಮತ್ತು ವೈಜ್ಞಾನಿಕ ಗುರಿಗಳನ್ನು ಪೂರೈಸುವಲ್ಲಿ ಮಹತ್ವದ್ದಾಗಿದೆ.

## ಘಟಿಕೋತ್ಸವದಲ್ಲಿ ವಂದೇ ಮಾತರಂ

**(ಹಿಂದಿನ ಸಂಚಿಕೆಯಿಂದ...)**

ಐಐಇಎಸ್‌ಟಿ ಶಿಬ್‌ಪುರವು ಕೇವಲ ಶೈಕ್ಷಣಿಕ ಶ್ರೇಷ್ಠತೆಯನ್ನು ಮಾತ್ರವಲ್ಲದೆ, ಪರಿಸರ ಸ್ನೇಹಿ ಮತ್ತು ಸಮಗ್ರ ಅಭಿವೃದ್ಧಿಯ ಮಾದರಿಯಾಗಿಯೂ ಹೆಸರುವಾಸಿಯಾಗಿದೆ. ಶ್ರೀ ನರೇಂದ್ರ ಮೋದಿಜಿಯವರ ದೂರದೃಷ್ಟಿಯ ನಾಯಕತ್ವದಲ್ಲಿ, ನಾವು ಭಾರತದ ಪ್ರಗತಿಗೆ ಮತ್ತಷ್ಟು ಕೊಡುಗೆ ನೀಡಲು ಬದ್ಧರಾಗಿದ್ದೇವೆ. ನಮ್ಮ ಭವ್ಯ ಇತಿಹಾಸವನ್ನು ಸ್ಮರಿಸುತ್ತಾ, ಐಐಇಎಸ್‌ಟಿ ಶಿಬ್‌ಪುರವು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ನಮ್ಮ ವಿದ್ಯಾರ್ಥಿಗಳು ಮತ್ತು ಸಂಶೋಧಕರು ಶೈಕ್ಷಣಿಕ, ಕ್ರೀಡೆ ಮತ್ತು ಸಾಂಸ್ಕೃತಿಕ, ವಿವಿಧ ಕ್ಷೇತ್ರಗಳಲ್ಲಿ ವಿಶ್ವದಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ, ಎಂದು ಸಂತಸ ವ್ಯಕ್ತ ಪಡಿಸಿದರು.

ಐಐಇಎಸ್‌ಟಿಯ ನಂತರ ತಾವು ಪ್ರವೇಶಿಸಲಿರುವ ಪ್ರಪಂಚಕ್ಕೆ ತಮ್ಮ ಶಕ್ತಿ, ಯೋಚನೆ, ಸಹಾನುಭುತಿಯ ಅಗತ್ಯವಿದೆ. ಇಲ್ಲಿ ಪಡೆದ ಶಿಕ್ಷಣವನ್ನು ಅನುಸರಿಸಿ, ಹೊಸತನ್ನು ನಿರಂತರವಾಗಿ ಕಲಿಯಿರಿ. ನವೀನ ಆವಿಷ್ಕಾರಗಳಿಗೆ ಮುಕ್ತಮನಸ್ಸಿನಿಂದ ಒಗ್ಗಿಕೊಳ್ಳಬೇಕು. ಅಸಹಾಯಕರ ಧ್ವನಿಗೆ ಕಿವಿಯಾಗಿರಿ, ಅವರಿಗೆ ನೆರವಾಗಿರಿ. ನಿಮ್ಮ ಸೇವೆಯು ದೇಶಕ್ಕೆ ಅಮೂಲ್ಯ ಕೊಡುಗೆಯಾಗಲಿ! "ವಂದೇ ಮಾತರಂನ ಕೋಟಿ ಕೋಟಿ ಕಂಠ ಕಲಕಲ ನಿನಾದ ಕರಾಲೇ, ಕೋಟಿ ಕೋಟಿ ಭುಜೈರ್ಧೃತ ಖರ ಕರವಾಲೇ ಎಂಬ ಈ ಶಕ್ತಿಯುತ ಸಾಲುಗಳು ಭಾರತ ಮಾತೆಯ ಶಕ್ತಿ, ಧೈರ್ಯ ಮತ್ತು ಬಲವನ್ನು ಪ್ರತಿಬಿಂಬಿಸುತ್ತವೆ" ಎಂದು ಅವರು ಪದವಿಧರರನ್ನು ಉದ್ದೇಶಿಸಿ ಹೇಳಿದರು.

ಕಂಪ್ಯೂಟರ್ ಸೈನ್ಸ್ & ಟೆಕ್ನಾಲಜಿ ವಿಭಾಗದಲ್ಲಿ ಭಾರತದ ರಾಷ್ಟ್ರಪತಿಗಳಿಂದ ಚಿನ್ನದ ಪದಕ ಪಡೆದ ಪೆನುಗೊಂಡಾ ಎಸ್. ಎಂ. ಎಸ್. ಎನ್. ರಾಜೇಶ್, ಸಿಎಸ್‌ಟಿ ವಿಭಾಗದಿಂದ ಗಣೇಶ್ ಚಂದ್ರ ಮಿತ್ರ ಮೆಮೋರಿಯಲ್ ಪದಕವನ್ನು ಪಡೆದ ಶುಭ್ರೋಜ್ಯೋತಿ ಕರ್ಮಕರ್, ಸಿಎಚ್‌ಎಸ್‌ಟಿ ವಿಭಾಗದಿಂದ ಪದಕ ಪಡೆದ ವೃತಿ ಶರ್ಮಾ ಮುಂತಾದ ವಿದ್ಯಾರ್ಥಿಗಳಿ ಅಭಿನಂದನೆ ಸಲ್ಲಿಸಿದರು. ಇನ್ನುಳಿದ 1,031 ಪದವೀಧರರಿಗೆ, ಸ್ನಾತಕೋತ್ತರ ಪದವೀಧರರು ಮತ್ತು ಪಿಎಚ್‌ಡಿ ಹೊಂದಿರುವವರಿಗೆ ಪದವಿಗಳನ್ನು ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೋಲ್ ಇಂಡಿಯಾ ಲಿಮಿಟೆಡ್‌ನ ಅಧ್ಯಕ್ಷ ಪಿ.ಎಂ. ಪ್ರಸಾದ್, ಸಾರ್ವಜನಿಕ ಸಂಪರ್ಕ ಅಧಿಕಾರಿ ನಿರ್ಮಲ್ ಕುಮಾರ್ ಭಟ್ಟಾಚಾರ್ಯ, ಐಐಇಎಸ್‌ಟಿ ಶಿಬ್ಪುರದ ನಿರ್ದೇಶಕರಾದ ಪ್ರೊ. ವಿ.ಎಂ.ಎಸ್.ಆರ್. ಮೂರ್ತಿ, ವಿವಿಧ ವಿಭಾಗಗಳ ಪ್ರಾಧ್ಯಾಪಕರು ಮೊದಲಾವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


## 'ರಿಕ್ಷಿಸಿ' ಕೊಂಡು ಹೋಗುತ್ತಿರುವ ಅನಂತಕುಮಾರ್



ಕೇಂದ್ರ ಮಂತ್ರಿಗಳಾದ ಮೇಲೂ ಸಹಜವಾಗಿ ಮೆಟ್ರೋ-ಆಟೋ ರಿಕ್ಷಾ - ಸೈಕಲ್ ಗಳಲ್ಲಿ ಅನಂತಕುಮಾರ್ ಓಡಾಡಿದ ಸಂಗತಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಅಷ್ಟೇ ಅಲ್ಲ, 80 ರ ದಶಕದಲ್ಲಿ ಶ್ರೀ ಅನಂತಕುಮಾರ್ ಅವರು ಯಾವುದೇ ಎಬಿವಿಪಿ ಕಾರ್ಯಕರ್ತರ ಸಭೆ ಅಥವಾ ಸಮಾರಂಭದ ನಂತರ, ವಿಶೇಷವಾಗಿ ವಿದ್ಯಾರ್ಥಿನಿ ಕಾರ್ಯಕರ್ತೆಯರನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತಿದ್ದರು. ಹಾಸ್ಯವಾಗಿ "ರಿಕ್ಷಿಸಿ" ಕರೆದುಕೊಂಡು ಹೋಗಿ ಎಂದು ಸೂಚನೆ ಕೊಡುತ್ತಿದ್ದರು (ಆಟೋರಿಕ್ಷಾದಲ್ಲಿ ಸುರಕ್ಷಿತವಾಗಿ ತಲುಪಿಸಿ ಎಂದರ್ಥ) ಅನಂತಕುಮಾರ್ ಅವರ ಈ ರೀತಿಯ ವಿಶೇಷ ಕನ್ನಡ ಪದಗಳ ಪಟ್ಟಿಯಲ್ಲಿ ಸಸ್ಯಾಗ್ರಹವೂ ಒಂದು.

## ಶ್ರದ್ಧಾಂಜಲಿ



ಹುಬ್ಬಳ್ಳಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರು, ವಿಶ್ವ ಹಿಂದೂ ಪರಿಷತ್ ನಾಯಕ ಡಾ. ಗೋವಿಂದ್ ನರೇಗಲ್ ಅವರು ಇತ್ತೀಚಿಗೆ (ಫೆಬ್ರವರಿ 18) ನಿಧನರಾಗಿರುತ್ತಾರೆ. ಅವರ ಅಗಲಿಕೆಗೆ ಸಂತಾಪ ಸೂಚಿಸುತ್ತಾ ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇವೆ.

# ಅಸ್ಮಿತೆ- ಕ್ಷಾತ್ರತೇಜ

**(ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ವೇದವ್ಯಾಸಾಚಾರ್ ಶ್ರೀಶಾನಂದರವರು ಅನಂತ ಸೇವಾ ಉತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು "ಅಸ್ಮಿತೆ ಮತ್ತು ಕ್ಷಾತ್ರತೇಜ"ದ ವಿಷಯ ಕುರಿತು ಮಾಡಿದ ಭಾಷಣದ ಸಾರಾಂಶ)**




"ಅಸ್ಮಿತಾ" ಎಂಬ ಸಂಸ್ಕೃತ ಶಬ್ದವು ಕನ್ನಡದಲ್ಲಿ "ಅಸ್ಮಿತೆ" ಎಂದು ರೂಪಾಂತರ ತಾಳಿದೆ. ಸಂಸ್ಕೃತದಲ್ಲಿ "ಸ್ಮಿತ" ಎಂದರೆ ನಗುವ ವ್ಯಕ್ತಿತ್ವ. "ಅಸ್ಮಿತ" ಎಂದರೆ ಗಂಭೀರ ಸ್ವಭಾವ ಎಂದು ಸೂಚಿಸುತ್ತದೆ. ಅಸ್ಮಿತೆ ಎಂದರೆ "ಅಸ್ತಿತ್ವ" ಅಥವಾ "ತನ್ನ ಗುರುತು" ಎಂದು ಪರಿಗಣಿಸಬಹುದು. ಅಸ್ಮಿತೆ ಎಂಬ ಪದಕ್ಕೆ ಹತ್ತಿರವಾದ ಅರ್ಥ "ಅಹಂಕಾರ". ಪ್ರತಿಯೊಂದು ಜೀವಿಗೂ ತನ್ನನ್ನು ಗುರುತಿಸಬೇಕು ಎಂಬ ಅಹಂಕಾರವಿರುತ್ತದೆ. ಇದನ್ನು ದಾಸರು ತಮ್ಮ ಕೀರ್ತನೆಗಳಲ್ಲಿ "ಸದಾಂಕಾರಿಗಳು ನಾವು ಗರ್ವದಿ ಮೆರೆಯುವೆವು, ಹನುಮನ ಮತವೆ ಶ್ರೇಷ್ಠವೆಂದು ಜಂಭದಿ ಕುಣಿಯುವೆವು" ಎಂದು ಹೇಳುತ್ತಾರೆ. ಇದರಿಂದಾಗಿ, ಅಸ್ಮಿತೆಯು ಆತ್ಮಗೌರವದಿಂದ ಅಹಂಕಾರಕ್ಕೆ ಹೇಗೆ ಮಾರ್ಪಾಡಾಗಬಹುದು ಎಂಬುದರ ತಾತ್ವಿಕ ಕಾರಣವೂ ನಮಗೆ ಗೋಚರಿಸಬಹುದು.

ಅಸ್ಮಿತೆಯ ಉದಾಹರಣೆಗಳನ್ನು ನಾವು ಪ್ರಕೃತಿಯಲ್ಲಿಯೇ ನೋಡಬಹುದು, ಒಂದು "ಕಂಬಳಿಹುಳು" (Caterpillar) ತನ್ನ ಜೀವಿತವನ್ನು ಒಂದು ಸಂಸ್ಕರಣಾ ಪ್ರಕ್ರಿಯೆಯಲ್ಲಿ ಕಳೆಯುತ್ತದೆ. ಅದು ತನ್ನದೇ ಶಕ್ತಿಯಿಂದ ಒಂದು ಕೋಶವನ್ನು ನಿರ್ಮಿಸಿ, ಅದರಲ್ಲಿ ಕೆಲವು ತಿಂಗಳು ಉಳಿದುಕೊಂಡು, ನಂತರ ಸುಂದರ ಬಣ್ಣಬಣ್ಣದ ಚಿಟ್ಟೆಯಾಗಿ ರೂಪಾಂತರಗೊಳ್ಳುತ್ತದೆ. ಈ ಆಂತರಿಕ ಸಂಸ್ಕರಣೆ ಮತ್ತು ಪರಿವರ್ತನೆಯು ಭಗವಂತನ ವೈಶಿಷ್ಟ್ಯವಾಗಿದೆ. ಮಧ್ವಾಚಾರ್ಯರು ಹೇಳುವಂತೆ, ಭಗವಂತನು ಬಹುಚಿತ್ರಜಗತ್ತನ್ನು ಸೃಷ್ಟಿಸಿದ್ದಾನೆ. ಪ್ರತಿಯೊಂದು ಚಿಟ್ಟೆಯೂ ತನ್ನದೇ ಆದ ವಿನ್ಯಾಸವನ್ನು ಹೊಂದಿರುತ್ತದೆ; ವಿಭಿನ್ನ ಬಣ್ಣದಲ್ಲಿ ಕಾಣಿಸುತ್ತದೆ. ಪ್ರತಿಯೊಂದು ಚಿಟ್ಟೆಯೂ ತನ್ನದೇ ಆದ ಅಸ್ಮಿತೆಯನ್ನು ಹೊಂದಿರುತ್ತದೆ. ಕೇವಲ ಏಳರಿಂದ ಹದಿಮೂರು ದಿನ ಬದುಕುವ ಈ ಪುಟ್ಟ ಚಿಟ್ಟೆಗೆ ಅಷ್ಟೊಂದು ಅಸ್ಮಿತೆ ಇರಬೇಕಾದರೆ, ಇಂತಹ ಬೃಹತ್ತಾದ ಭಾರತ ದೇಶಕ್ಕೆ ಅಸ್ಮಿತೆ ಬೇಡವೇ? ನಮ್ಮ ದೇಶದ ಅಸ್ಮಿತೆಯನ್ನು ನಾವು ಎಲ್ಲಿ ಕಂಡುಕೊಂಡೇವು? ಅಸ್ಮಿತೆಗೂ ಕ್ಷಾತ್ರತೇಜಕ್ಕೂ ಏನು ಸಂಬಂಧ? ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಕ್ಷಾತ್ರತೇಜ ಇರಬೇಕೆ? - ಇವೆಲ್ಲವೂ ನಾವು ತಿಳಿಯಲೇ ಬೇಕಾದ ವಿಷಯ.



ಭಾರತವು ಅನೇಕ ಆಕ್ರಮಣಗಳನ್ನು ಎದುರಿಸಿದ ಇತಿಹಾಸವನ್ನು ಹೊಂದಿದೆ. ಪ್ರಾಚೀನ ಭಾರತದ ಭೂಪ್ರದೇಶ ಬಹಳ ವಿಶಾಲವಾಗಿತ್ತು. ಬ್ರಿಟಿಷರ ಆಳ್ವಿಕೆಗಿಂತ ಮೊದಲು ನಾವು ಏನಾಗಿದ್ದೆವು? ಅವರ ಆಳ್ವಿಕೆಯ ನಂತರ ನಾವು ಹೇಗೆ ಬದಲಾದೆವು? ಸ್ವಾತಂತ್ರ್ಯಕ್ಕೆ ಮೊದಲು ನಮ್ಮ ಅಸ್ಮಿತೆ ಹೇಗಿತ್ತು? ಈಗ ಸ್ವಾತಂತ್ರ್ಯೋತ್ತರ 75 ವರ್ಷಗಳಲ್ಲಿ ನಮ್ಮ ದೇಶದ ಅಸ್ಮಿತೆಯ ಬೆಳವಣಿಗೆ ಹೇಗಿದೆ? ಇವೆಲ್ಲವನ್ನೂ ನಾವು ಗಮನಿಸಬೇಕಾಗಿದೆ.

ಭಾರತವು ವೇದಕಾಲದಿಂದಲೂ ಭರತವರ್ಷ ಎಂದು ಕರೆಯಲ್ಪಟ್ಟಿದೆ. ಈ ಹೆಸರು ಬರಲು ಕಾರಣವಿದೆ. ಕವಿವಾಣಿಯಲ್ಲಿ "ಭರತಭೂಮಿ ನನ್ನ ತಾಯಿ ನನ್ನ ಪೊರೆವ ತೊಟ್ಟಿಲು" ಎಂದು ಕರೆಯುತ್ತಾರೆ. "ತಾಯಿ ಭಾರತಿ ನಿನ್ನ ಮೂರುತಿ ಎದೆಯ ಗುಡಿಯೊಳಿಟ್ಟು ಭಜಿಸಿ ಜ್ವಲಿಪೆನಾರತಿ" ಎಂದು ಹಾಡುತ್ತಾರೆ. "ಧರೆಗವತರಿಸಿದ ಸ್ವರ್ಗದ ಸ್ಪರ್ಧಿಯು ಸುಂದರ ತಾಯ್ನೆಲವೂ ನಮ್ಮೀ ತಾಯ್ ನೆಲವು" ಎಂದು ಹೇಳಿದ್ದಾರೆ. "ದೇವಿ ನಿನ್ನಯ ಸೊಬಗಿನ ಮಹಿಮೆಯ ಬಣ್ಣಿಸಲಸದಳವು" ಎಂದು ನಮ್ಮ ದೇಶವನ್ನು ವರ್ಣಿಸಿದ್ದಾರೆ. ಇಂತಹ ದೇಶ ನಮ್ಮದು. "ಇಂಡಿಯಾ" ಎಂಬ ಆಂಗ್ಲ ಪದವು ಸಿಂಧೂ ನದಿಯಿಂದ ಬಂದಿದೆ. ಸಿಂಧೂ ಎಂದು ಹೇಳಲು ಬರದವರು ಇಂಡಸ್ ಎಂದು ಕರೆದರು. ಅಲ್ಲಿಂದ ಇಂಡಿಯಾ ಎಂಬ ಪದವು ಬಂದಿತು ಎಂದು ಹೇಳುತ್ತಾರೆ. ನಮ್ಮ ದೇಶ ಭಾರತ ಎಂದು ಹೇಳಿಕೊಳ್ಳಲು ನಾವು ಹೆಮ್ಮೆ ಪಡಬೇಕು. ಏಕೆಂದರೆ, ನಮ್ಮ ದೇಶವು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ನಮ್ಮ ಸಂಸ್ಕೃತಿ, ಪರಂಪರೆ, ಜ್ಞಾನ, ಆಧ್ಯಾತ್ಮಿಕತೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ.

ಪಾಶ್ಚಿಮಾತ್ಯರು ನಮ್ಮ ದೇಶವನ್ನು ತುಚ್ಛವಾಗಿ ವರ್ಣಿಸಿದಾಗ ಅದಕ್ಕೆ ಉತ್ತರವಾಗಿ ಸ್ವಾಮಿ ವಿವೇಕಾನಂದರು ನಮ್ಮ ದೇಶವನ್ನು ನೋಡುವ ಕಣ್ಣುಗಳಲ್ಲಿ ನೀವು ನೋಡಬೇಕು. "ನಮ್ಮ ದೇಶದಲ್ಲಿ ಕಷ್ಟಗಳು ಇರಬಹುದು, ಆದರೆ ನಮ್ಮಲ್ಲಿರುವ ಮಾನವೀಯತೆ, ಪ್ರೀತಿ, ತ್ಯಾಗಗಳು ಇಡೀ ವಿಶ್ವದಲ್ಲಿ ಬೇರೆಲ್ಲೂ ಇಲ್ಲ. ಅತಿಕ್ರಮಣ ಮಾಡಿದವರು ಸಾವಿರಾರು ಬಾರಿ ಕೊಳ್ಳೆ ಹೊಡೆದುಕೊಂಡು ಹೋದರೂ ನಮ್ಮ ದೇಶ ಶ್ರೀಮಂತವಾಗಿಯೇ ಉಳಿದಿದೆ. ಭಾರತವು ಭೋಗದೇಶವಲ್ಲ, ಯೋಗದೇಶ" ಎಂದು ವಿವೇಕಾನಂದರು ವರ್ಣಿಸಿದ್ದರು.

ಮೂರನೇ ಶತಮಾನದಲ್ಲಿ ಪ್ರಪಂಚದ ಇತರ ಭಾಗಗಳಲ್ಲಿ ಮೈ ಮುಚ್ಚಿಕೊಳ್ಳುವುದೂ ಗೊತ್ತಿಲ್ಲದ ಸಂದರ್ಭದಲ್ಲಿಯೇ ನಾವು ನಳಂದಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದೆವು. ವಿದೇಶದ ಜನರು ಬಂದು ಇಲ್ಲಿ ಕಲಿಯುತ್ತಿದ್ದರು. ನಮ್ಮ ದೇಶವು ಜ್ಞಾನವನ್ನು, ಆಧ್ಯಾತ್ಮಿಕತೆಯನ್ನು ಇಡೀ ವಿಶ್ವಕ್ಕೆ ಕೊಡುಗೆಯಾಗಿ ನೀಡಿದೆ. ಇಂತಹ ದೇಶವು ಇಂದು ಅಸ್ತಿತ್ವಕ್ಕಾಗಿ ಹೋರಾಡುವ ಪರಿಸ್ಥಿತಿಗೆ ಬಂದು ತಲುಪಿರುವುದು ನಮ್ಮ ದುರದೃಷ್ಟ.

ನಮ್ಮ ದೇಶದ ಮೇಲೆ ಹಲವಾರು ದಾಳಿಗಳು ನಡೆದಿವೆ. ಚರಿತ್ರೆಯಲ್ಲಿ ಹೇಳಿದ, ಹೇಳದೇ ಇರದಂತಹ ಅನೇಕ ಭೀಕರ ಸಂಗತಿಗಳು ಜನಮಾನಸದಲ್ಲಿ ಉಳಿದುಕೊಂಡು, ಮರೆತು ಹೋದವು. ಈಗ ಮತ್ತೊಮ್ಮೆ ನಾವು ಎಲ್ಲವನ್ನೂ ಮರೆತು ಜಂಭದಿಂದ ಕುಣಿಯುತ್ತಿದ್ದೇವೆ. ಅಹಂಕಾರ ಇರಲಿ, ಆದರೆ ಸದಹಂಕಾರವಿರಲಿ. ನನ್ನ ದೇಶ ದೊಡ್ಡದು ಎನ್ನುವ ವಿಚಾರ ತಿಳಿದುಕೊಳ್ಳಬೇಕಾಗಿದೆ. ನಮ್ಮ ರಾಷ್ಟ್ರ ಪ್ರೇಮವನ್ನು ಜಾಗೃತಗೊಳಿಸಬೇಕಾದ ಅವಶ್ಯಕತೆ ಇದೆ.

ಭಾರತದಲ್ಲಿ ಕೆಲವು ನ್ಯೂನತೆಗಳು ಇವೆ ಎನ್ನುವ ಕಾರಣಕ್ಕಾಗಿ ಭಾರತವನ್ನೇ ಅಮ್ಮ ಎಂದು ಕರೆಯದಿರಲು ಸಾಧ್ಯವೇ? ಎಷ್ಟೇ ನ್ಯೂನತೆಗಳಿದ್ದರೂ ಅವಳು ನಮ್ಮ ತಾಯಿ. ನಾವು ಅವಳನ್ನು ಪ್ರೀತಿಸಬೇಕು, ಗೌರವಿಸಬೇಕು ಮತ್ತು ಅವಳನ್ನು ರಕ್ಷಿಸಬೇಕು. ನಮ್ಮಲ್ಲಿನ ಸಂಪತ್ತನ್ನು ಅನೇಕ ಬಾರಿ ಕೊಳ್ಳೆ ಹೊಡೆಯಲಾಗಿದೆ. ಆದರೂ, ನಮ್ಮಲ್ಲಿ ಇನ್ನೂ ಚಿನ್ನವಿದೆ ಎಂದರೆ ಮೊದಲು ಎಷ್ಟು ಇದ್ದಿರಬಹುದು ಎಂದು ಊಹಿಸಿ. ಭೌತಿಕ ಸಂಪತ್ತನ್ನು ಕಸಿದುಕೊಳ್ಳಬಹುದು, ಆದರೆ ಬೌದ್ಧಿಕ ಸಂಪತ್ತನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಇಂದು ಯಾವುದೇ ವೈಜ್ಞಾನಿಕ ಆವಿಷ್ಕಾರಗಳಲ್ಲಿ, ವಿಜ್ಞಾನ, ಕಲೆ, ಖಗೋಳಶಾಸ್ತ್ರ, ಹೀಗೆ ಎಲ್ಲ ಪ್ರಮುಖ ಕ್ಷೇತ್ರಗಳಲ್ಲಿ ಭಾರತೀಯರ ಪಾತ್ರವಿದೆ. ಇದು ನಮ್ಮ ದೇಶದ ಹೆಮ್ಮೆ.

ನಮ್ಮ ದೇಶದ ಅಸ್ಮಿತೆಯು ಕ್ಷಾತ್ರತೇಜ ಮತ್ತು ಆದರ್ಶ ಜೀವನದ ಮೌಲ್ಯಗಳ ಮೇಲೆ ಸ್ಥಿರವಾಗಿದೆ. ನಮ್ಮ ದೇಶದಲ್ಲಿ ಮೌಲ್ಯಯುತವಾಗಿ ಆಳ್ವಿಕೆ ನಡೆಸಿದ ಮಹಾನ್ ರಾಜರ ಕಥೆಗಳನ್ನು ನಮ್ಮ ಮಕ್ಕಳಿಗೆ ಹೇಳುವುದನ್ನು ನಾವು ಮರೆತಿದ್ದೇವೆ. ರಾಜಾ ರಂತಿದೇವನಂತಹ ಒಬ್ಬ ರಾಜನನ್ನು ಪಡೆಯಲು ಒಂದು ದೇಶವು ಎಂತಹ ಪುಣ್ಯ ಮಾಡಿರಬೇಕು! ರಂತಿದೇವನ ಕಾಲದಲ್ಲಿ 12 ವರ್ಷಗಳ ಕಾಲ ಅನಾವೃಷ್ಟಿ ಕಾಡುತ್ತದೆ. ದೇಶದ ಸಂಪತ್ತು, ರಾಜನ ಖಜಾನೆ ಖಾಲಿಯಾಗುತ್ತದೆ. ಕೊನೆಯಲ್ಲಿ, ತನ್ನ ಜೀವವನ್ನು ಉಳಿಸಿಕೊಳ್ಳಲು ಕೇವಲ ಒಂದು ತಂಬಿಗೆ ನೀರನ್ನು ರಾಜ ಇಟ್ಟುಕೊಂಡಿರುತ್ತಾನೆ. ರಾಣಿ, ರಂತಿದೇವ ಮತ್ತು ಮಂತ್ರಿ ಮೂರೇ ಜನ ಇರುವಾಗ ಒಂದು ಹಸು ಬಂದು ನೀರು ಕೇಳುತ್ತದೆ. ಅಂದು ರಂತಿದೇವ ನೀರೂ ಕುಡಿಯದ 42ನೇ ದಿನ. ಆ ದಿನವೂ ನೀರು ಕುಡಿಯದಿದ್ದರೆ ಪ್ರಾಣ ಹೋಗುವ ಪರಿಸ್ಥಿತಿಯಲ್ಲೂ ಉಳಿಸಿಕೊಂಡಿರುವುದರಲ್ಲಿ ಅರ್ಧ ತಂಬಿಗೆ ನೀರನ್ನು ರಾಜ ಹಸುವಿಗೆ ಕೊಡುತ್ತಾನೆ. ಇನ್ನು ಉಳಿದುಕೊಂಡಿರುವ ಅರ್ಧ ತಂಬಿಗೆ ನೀರನ್ನು ರಾಜ, ರಾಣಿ ಮತ್ತು ಮಂತ್ರಿ ಮೂರು ಜನ ಕುಡಿಯಬೇಕು. ಅಷ್ಟರಲ್ಲಿ ಒಬ್ಬ ಪ್ರಜೆ ಬಂದು, "ರಾಜನೇ ನನಗೆ ತುಂಬಾ ಬಾಯಾರಿಕೆಯಾಗಿದೆ. ನನಗೆ ಒಂದು ಲೋಟ ನೀರು ಕೊಡದಿದ್ದರೆ ನಾನು ಸತ್ತು ಹೋಗುತ್ತೇನೆ" ಎಂದು ಹೇಳುತ್ತಾನೆ. "ರಾಜನೇ ಉಳಿಯದಿದ್ದರೆ ಅರಾಜಕತೆ ಆಗುತ್ತದೆ ಅವನಿಗೆ ನೀರು ಕೊಡುವುದು ಬೇಡ" ಎಂದು ರಾಣಿ ಮತ್ತು ಮಂತ್ರಿ ತಡೆಯುತ್ತಾರೆ. ಆಗ "ಪ್ರಜೆಗೆ ನೀರು ಕೊಡಲಾರದಂಥ ರಾಜ ಇದ್ದರೆಷ್ಟು? ಅಂತಹ ರಾಜ್ಯದಲ್ಲಿ ಅರಾಜಕತೆ ಇದ್ದರೆಷ್ಟು?" ಎಂದು ಹೇಳಿದ ರಂತಿದೇವನ ಮಾತುಗಳನ್ನು ಕೇಳಿದರೆ ಮೈ ಜುಮ್ಮೆನಿಸುತ್ತದೆ.

ಅದು ರಂತಿದೇವನನ್ನು ದೇವತೆಗಳು ಪರೀಕ್ಷಿಸಿದ ರೀತಿ. ತನ್ಮೂಲಕ ಅವರು ರಂತಿದೇವನ ಉನ್ನತವಾದ ಮಾನಸಿಕ ಸ್ಥಿತಿಯನ್ನು ಜಗತ್ತಿಗೆ ತೋರಿಸುತ್ತಾರೆ. ರಂತಿದೇವನ ಪುಣ್ಯಫಲದಿಂದ ಮತ್ತೆ ಮಳೆಬೆಳೆ ಬಂದು ದೇಶ ಸಮೃದ್ಧವಾಗುತ್ತದೆ

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು...)**

# "ಮೈ ಸ್ಟೋರಿ"- ನೇತೃತ್ವದ ಕಥನಗಳು

## ಸಿಮೆಂಟ್ ಮತ್ತು ಉಕ್ಕು ಉದ್ಯಮಗಳಲ್ಲಿ ಪರಿಸರ ಸ್ನೇಹಿ ಉಪಕ್ರಮಗಳು




ಅನಂತಕುಮಾರ್ ಪ್ರತಿಷ್ಠಾನದ ಮತ್ತೊಂದು ಮಹತ್ವದ ಕಾರ್ಯಕ್ರಮ "ಮೈ ಸ್ಟೋರಿ - ನೇತೃತ್ವದ ಕಥನಗಳು" ಇದೇ ಫೆಬ್ರವರಿ 16 ರಂದು ಉದ್ಘಾಟನೆಗೊಂಡಿತು. ಈ ಕಾರ್ಯಕ್ರಮದಲ್ಲಿ ಸಮಾಜದ ಅನೇಕ ಸಾಧಕರನ್ನು ಆಹ್ವಾನಿಸಿ, ಅವರದೇ ಜೀವನದ ಅದ್ಭುತ ಅನುಭವಗಳನ್ನು ಸಾರ್ವಜನರಿಗೆ ಅದರಲ್ಲಿಯೂ ಯುವಕರಿಗೆ ಮನಸ್ಸಿಗೆ ತಟ್ಟುವಂತೆ ವಿಷಯಗಳನ್ನು ಮಂಡಿಸಲಾಗುತ್ತದೆ. ತನ್ಮೂಲಕ ಯುವಕರಲ್ಲಿ ನೇತೃತ್ವ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಕಲ್ಪಿಸಲಾಗುತ್ತದೆ. ಈ ಭಾಷಣ ಸರಣಿಯನ್ನು ನಂತರ ಸಾಮಾಜಿಕ ಜಾಲತಾಣಗಳ ಮೂಲಕ ಎಲ್ಲರಿಗೂ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ.

ಈ ಸರಣಿಯ ಪ್ರಥಮ ಉಪನ್ಯಾಸವನ್ನು ಡಾ. ಎಸ್. ರಂಗನಾಥನ್ ನಡೆಸಿಕೊಟ್ಟರು. ಡಾ. ರಂಗನಾಥನ್ ಅವರು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಪರಿವರ್ತನೆ ಸಚಿವಾಲಯದ ಪರಿಣತರ ಸಮಿತಿಯ ಸದಸ್ಯರಾಗಿದ್ದು, ಬೃಹತ್ ಯೋಜನೆಗಳು ಪರ್ಯಾವರಣಕ್ಕೆ ಉಂಟುಮಾಡುವ ಪರಿಣಾಮಗಳನ್ನು ಅವಲೋಕಿಸಿ, ಸಮರ್ಪಕ ಪರಿಹಾರಗಳೊಂದಿಗೆ ಅನುಮೋದನೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಡಾ. ರಂಗನಾಥನ್ ಅವರು ಸಿಮೆಂಟ್ ಮತ್ತು ಉಕ್ಕು ಉದ್ಯಮಗಳ ಬಗ್ಗೆ ವಿಶೇಷ ಪರಿಣಿತರಾಗಿದ್ದು, ಈ ಉದ್ಯಮಗಳಿಂದ ಉಂಟಾಗುವ ಮಾಲಿನ್ಯದ ಕುರಿತು ಸುಧೀರ್ಘ ವಿವರಣೆ ನೀಡಿದರು. ಅಲ್ಲದೆ, ಪರಿಸರ ಸ್ನೇಹಿಯಾಗಿ ಈ ಸಮಸ್ಯೆಗಳನ್ನು ನಿರ್ವಹಿಸಲು ಹಾಗೂ ತಂತ್ರಜ್ಞಾನ ಬಳಸಿ ದೋಷರಹಿತ ಉತ್ಪಾದನೆಗೆ ಹೇಗೆ ಸಹಾಯ ಮಾಡಬಹುದು ಎಂಬ ಕುರಿತು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪ್ರತಿಷ್ಠಾನದ ಚಟುವಟಿಕೆಗಳ ವಿವರ ನೀಡಿ, ಡಾ. ರಂಗನಾಥನ್ ಅವರ ಪರಿಚಯ ಮಾಡಿಸಿ, ಅವರಿಗೆ ಆತ್ಮೀಯ ಸ್ವಾಗತ ಕೋರಿದರು. ಸಭೆಯಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಆಸಕ್ತರು ಭಾಗವಹಿಸಿದ್ದರು. ಅದಮ್ಯ ಚೇತನದ ಸಭಾಂಗಣದಲ್ಲಿ ಮಾಡಿದ ಮೂಡಿಬಂದ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.



ಪುಟ 1 ರಿಂದ

ಕಾಮ್ ಹಿ ಪೆಹಚಾನ್ (ಕೆಲಸವೇ ನನ್ನ ಗುರುತು) ಇದು ರೇಖಾ ಗುಪ್ತಾ ಅವರ ಮಾತುಗಳು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ABVP) ಸಂಘಟನೆಯ ಹಿನ್ನೆಲೆಯಿಂದ ಬಂದ ಶ್ರೀಮತಿ ರೇಖಾ ಗುಪ್ತಾರವರು ದೆಹಲಿಯ ನೂತನ ಮುಖ್ಯಮಂತ್ರಿಯಾಗಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಯೊಂದಿಗೆ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. ದೆಹಲಿ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಎಬಿವಿಪಿಯ ಹಿನ್ನೆಲೆಯಿಂದ ಬಂದ ಪ್ರಮುಖರಾಗಿದ್ದ ರಾಜಕೀಯ ನಾಯಕರಲ್ಲಿ ಅರುಣ್ ಜೇಟ್ಲಿ, ಶ್ರೀ ಅನಂತಕುಮಾರ್ ಮತ್ತು ಶ್ರೀ ಸುಶೀಲ್ ಕುಮಾರ್ ಮೋದಿ ಈ ಮೂವರೂ ಮುಖ್ಯಮಂತ್ರಿಯಾಗುವ ಸಾಮರ್ಥ್ಯವನ್ನು ಹೊಂದಿದ್ದರೂ ಅಕಾಲಿಕ ನಿಧನರಾದುದರಿಂದ ಅವರೆಲ್ಲರಿಗೂ ಮುಖ್ಯಮಂತ್ರಿಯಾಗುವ ಅವಕಾಶ ಲಭಿಸಲಿಲ್ಲ ಎಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ವರದಿ ಮಾಡಿದೆ.

**ಲಾಲ್‌ಬಾಗ್ ಪಶ್ಚಿಮ ದ್ವಾರ ಅನಂತ ಸ್ಮೃತಿವನದಲ್ಲಿ ನಿತ್ಯ ಅನ್ನದಾನದ ಸೇವೆ ನಿರಂತರವಾಗಿ ನಡೆಯುತ್ತಿದೆ .**



## ನಿತ್ಯ ಅನ್ನದಾನ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ |
|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ, ಬೆಂಗಳೂರು, ಮ: 2.00 ರಿಂದ 3.00 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ: 12.30 ರಿಂದ 1.30 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ: 12.30 ರಿಂದ 1.30 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ: 12.30 ರಿಂದ 1.30 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ: 12:30ರಿಂದ 1:30ರವರೆಗೆ |
| 6 | ಶ್ರೀ ಈಶ್ವರ ದೇವಸ್ಥಾನ, ರೈಲ್ವೆ ಸ್ಟೇಷನ್ ರಸ್ತೆ, ಹುಬ್ಬಳ್ಳಿ ಮ: 12:30ರಿಂದ 1:30ರವರೆಗೆ |
| 7 | ಸ್ವಾಭಿಮಾನ ಸ್ವದೇಶಿ ಕೇಂದ್ರ ಸಂಕೀರ್ಣದ ಎದುರು, ಸೇಡಂ ರಸ್ತೆ, ಕಲಬುರ್ಗಿ ಮ: 12:30ರಿಂದ 1:30ರವರೆಗೆ |
| 8. | ಮಹಾತ್ಮ ಗಾಂಧೀಜಿ ಆಸ್ಪತ್ರೆಯ ಆವರಣ, ಜೋಧಪುರ, ರಾಜಸ್ಥಾನ. ಮ: 12:30 ರಿಂದ 2:00ವರೆಗೆ |

ನಿತ್ಯ ಅನ್ನದಾನ ಯೋಜನೆಯ ಸೇವೆಯನ್ನು ನಮ್ಮ ಎಲ್ಲಾ ಕೇಂದ್ರಗಳಲ್ಲಿಯೂ ಪ್ರತಿದಿನ 150 ರಿಂದ 250 ಜನರು ಉಪಯೋಗಿಸುತ್ತಿದ್ದಾರೆ. ಈ ಪವಿತ್ರ ಕಾರ್ಯದಲ್ಲಿ ಪ್ರಾಯೋಜಕರಾಗಿ ಮತ್ತು ಸಹಯೋಗಿಗಳಾಗಿ ಭಾಗವಹಿಸಲು ಅವಕಾಶವಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
**89046 23967**

ವ್ಯಕ್ತಿ ವಿಶೇಷ ಮಾಲಿಕೆ

# ‘ಸಂತ ಸೇವಾಲಾಲ ಮಹಾರಾಜರು’

- ಕೆ. ಜನಾರ್ದನ ತುಂಗ

ಹೈದರಾಬಾದಿನಲ್ಲಿ ಬಂಜಾರಾ ಹಿಲ್ಸ್ ಅತ್ಯಂತ ಶ್ರೀಮಂತ ಬಡಾವಣೆ ಎನಿಸಿದೆ. ಆದರೆ ಈ ಹೆಸರಿನ ಹಿನ್ನೆಲೆ ನಿಮಗೆ ಗೊತ್ತೆ?



ಸಂತ ಸೇವಾಲಾಲ ಮಹಾರಾಜರು ಲಂಬಾಣಿ ಅಥವಾ ಬಂಜಾರಾ ಸಮುದಾಯಕ್ಕೆ ಸೇರಿದ, ಭಾರತದ ಶ್ರೇಷ್ಠ ಅಧ್ಯಾತ್ಮ ಗುರುಗಳಲ್ಲಿ ಒಬ್ಬರು. ತಮ್ಮ ಅನುಯಾಯಿಗಳ ಜೊತೆಗೆ ಸದಾ ಸಂಚಾರದಲ್ಲಿರುತ್ತಿದ್ದ ಅವರು ಒಮ್ಮೆ ತಿರುಪತಿಯಿಂದ ಹೈದರಾಬಾದ್ ಕಡೆಗೆ ಪ್ರಯಾಣಿಸಿದ್ದರು. ದನಗಾಹಿ ಎಂದೇ ಪರಿಗಣಿತರಾಗಿದ್ದ ಅವರು ತಮ್ಮ ಅಪಾರ ಪಶುಸಂಪತ್ತಿನೊಡನೆ ಹೈದರಾಬಾದಿನಲ್ಲಿ ತಂಗಿದ್ದಾಗ ಅವರ ಗೋವುಗಳು ತಮ್ಮ ಫಸಲನ್ನು ತಿಂದು ನಷ್ಟ ಮಾಡುತ್ತಿವೆ ಎಂದು ಕೆಲವರು ನಿಜಾಮನಲ್ಲಿ ದೂರಿಕೊಂಡರು. ನಿಜಾಮನು ವಿಚಾರಣೆಗೆಂದು ಸೇವಾಲಾಲರನ್ನು ಕರೆಯಿಸಿದಾಗ ಅವರು ಬರಲು ನಿರಾಕರಿಸಿದರು. ಇದರಿಂದ ಕುಪಿತನಾದ ನಿಜಾಮನು ಇಡೀ ತಂಡಕ್ಕೆ ವಿಷವುಣಿಸಿ ಕೊಲ್ಲುವ ಉದ್ದೇಶದಿಂದ ವಿಷಪೂರಿತ ಸಿಹಿತಿಂಡಿಗಳನ್ನು ಕಳಿಸಿದನು. ನಿಜಾಮನ ಕುತಂತ್ರವನ್ನು ಊಹಿಸಿದ ಸೇವಾಲಾಲರು ತಾವು ಆರಾಧಿಸುತ್ತಿದ್ದ ಶ್ರೀ ಮರಿಯಮ್ಮ ಯಾಡಿಯ ವಿಭೂತಿ ಪ್ರಸಾದವನ್ನು ಸಿಹಿತಿಂಡಿಯ ಜೊತೆ ಬೆರೆಸಿ ತಮ್ಮ ನೆಚ್ಚಿನ ಗರಾಸಿಯಾ ಗೂಳಿಗೆ ತಿನ್ನಿಸಿದರು. ವಿಷಪ್ರಾಶನ ಮಾಡಿದ ಗೂಳಿಯು ಸಾಯದಿದ್ದುದನ್ನು ಕೇಳಿ ನಿಜಾಮನಿಗೆ ಅಚ್ಚರಿಯಾಯಿತು. ಇದೇ ಸಮಯದಲ್ಲಿ ಹೈದರಾಬಾದಿಗೆ ಎರಗಿದ್ದ ಸಾಂಕ್ರಾಮಿಕ ಕಾಯಿಲೆಯು ಸೇವಾಲಾಲರ ತಾಂಡಾದ ಮೇಲೆ ಯಾವ ಪ್ರಭಾವವನ್ನೂ ಬೀರದಿದ್ದುದನ್ನು ನೋಡಿದ ನಿಜಾಮ ಅವರನ್ನು ತನ್ನ ಅರಮನೆಗೆ ಕರೆಸಿ ಪಾದಪೂಜೆ ಮಾಡಿ ಅವರು ಹೈದರಾಬಾದಿನಲ್ಲಿ ನೆಲೆಯೂರಲು ಅವಕಾಶ ಮಾಡಿಕೊಡುತ್ತಾನೆ. ಅಂದು ಬಂಜಾರರು ನೆಲೆಸಿದ ಆ ಪ್ರದೇಶವೇ ಇಂದು ಬಂಜಾರಾ ಹಿಲ್ಸ್ ಆಗಿದೆ.

ಇಂತಹ ಮಹಾಮಹಿಮ ಸೇವಾಲಾಲರು ಕರ್ನಾಟಕದ ದಾವಣಗೆರೆ ಜಿಲ್ಲೆಯ ಸೂರಗೊಂಡನ ಕೊಪ್ಪದಲ್ಲಿ, ಬಂಜಾರ ಕುಟುಂಬದ ಭೀಮನಾಯಕ ಮತ್ತು ಧರ್ಮಿಣಿ ಬಾಯಿಯವರ ಮಗನಾಗಿ ದಿನಾಂಕ ೧೫/೦೨/೧೭೩೯ರಲ್ಲಿ ಜನಿಸಿದರು. ಬಂಜಾರ ಕುಲದ ಮೂಲ ಪುರುಷರು ದಾದಮೋಲ ಮತ್ತು ರಾಧಿದಾದಿ ಹಾಗೂ ಅವರು ದತ್ತು ತೆಗೆದುಕೊಂಡ ರಾಠೋಡ್, ಪೊಮ್ಮಾರ್ ಮತ್ತು ಚವ್ಹಾಣರು. ಬಂಜಾರ ಪರಂಪರೆಯ ೬೪ ವೀರಪುರುಷರ ಪರಂಪರೆಯಲ್ಲಿ ಪ್ರಮುಖರು, ಸೇವಾಲಾಲರು.

ತಂದೆತಾಯಿಯರ ವಿವಾಹವಾಗಿ ೧೨ ವರ್ಷ ಕಳೆದರೂ ಮಕ್ಕಳಾಗದಿದ್ದಾಗ ಶ್ರೀ ಮರಿಯಮ್ಮ ತಾಯಿಯ ಕೃಪೆಯಿಂದ ಜನಿಸಿದ ಸೇವಾಲಾಲರು ಆಕೆಯ ಭಕ್ತರಾಗಿಯೇ ತಮ್ಮ ಜೀವನವನ್ನು ಕಳೆದರು. ಬಂಜಾರರು ಅಲೆಮಾರಿ ಜೀವನವನ್ನು ವರಿಸಿದವರಾಗಿದ್ದು ಪ್ರದೇಶದಿಂದ ಪ್ರದೇಶಕ್ಕೆ ಅಗತ್ಯ ಸರಕುಗಳನ್ನು ಸರಬರಾಜುಮಾಡುತ್ತ ಸಂಚರಿಸುತ್ತಿದ್ದ ಜನಾಂಗ. ಸೇವಾಲಾಲರ ತಂದೆ ಭೀಮನಾಯಕ ಶ್ರೀಮಂತ ವ್ಯಾಪಾರಿಯಾಗಿದ್ದರೂ ಕಾಲಕ್ರಮೇಣ ಬಡತನವನ್ನು ಅನುಭವಿಸಬೇಕಾಯಿತು. ತಂದೆಯ ವೃತ್ತಿಯನ್ನು ಮುಂದುವರಿಸಿದ ಸೇವಾಲಾಲರು ಶಿರಸಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಹುಲ್ಲು ಮಾರಿ ಬದುಕುವ ಹೀನಸ್ಥಿತಿಗೆ ಇಳಿದಿದ್ದರು. ಶಿರಸಿಯಿಂದ ಅವರು ಮಂಗಳೂರಿಗೆ ಭೇಟಿ ನೀಡಿದಾಗ ಬಂಜಾರ ಕುಲಕ್ಕೆ ಸೇರಿದ ಪ್ರಸಿದ್ಧ ಚಿನ್ನಬೆಳ್ಳಿ ವ್ಯಾಪಾರಿ ದುರ್ಗೈ ರಾಜ್‌ಗೆ ಸೇರಿದ ಹಡಗೊಂದು ಚಲಿಸಲಾರದೆ ಬಂದರಿನಲ್ಲಿ ಲಂಗರು ಹಾಕಿತ್ತು. ಎಷ್ಟು ಬಾರಿ ದುರಸ್ತಿ ಮಾಡಿದರೂ ಜಪ್ಪಯ್ಯ ಎನ್ನದ ಹಡಗು ಸೇವಾಲಾಲರು ಶ್ರೀ ಮರಿಯಮ್ಮ ದೇವಿಯ ಪೂಜೆ ಮಾಡಿ ಹಡಗನ್ನು ಪ್ರವೇಶಿಸಿ ಧ್ಯಾನ ಮಾಡಲು ತೊಡಗಿದ ಕೂಡಲೆ ಅದು ಪವಾಡವೆಂಬಂತೆ ಚಲಿಸತೊಡಗಿತು. ಇದರಿಂದ ಸೇವಾಲಾಲ ಕೀರ್ತಿ ಹೆಚ್ಚತೊಡಗಿ ಅವರ ತಂಡವೂ ಬೃಹತ್ತಾಗಿ ಬೆಳೆಯಿತು.

ಮಂಗಳೂರಿನಿಂದ ಮಡಿಕೇರಿ ಮಾರ್ಗವಾಗಿ ಸೇವಾಲಾಲರು ತಮ್ಮ ತಂಡದೊಂದಿಗೆ ಮೈಸೂರಿಗೆ ಆಗಮಿಸಿದರು. ಅವರ ಜನಪ್ರಿಯತೆ ಮತ್ತು ಅಗಾಧ ಸಂಖ್ಯೆಯ ಅನುಯಾಯಿಗಳನ್ನು ನೋಡಿ ಮೈಸೂರರಸರಿಗೆ ಅಸಮಾಧಾನವಾಯಿತು. ಮಾತುಕತೆಗಳ ಮೂಲಕ ಈ ಅಸಮಾಧಾನವನ್ನು ಹೋಗಲಾಡಿಸಿದ ಸೇವಾಲಾಲರು ಅಲ್ಲಿಂದ ಕೊಯಮತ್ತೂರು, ಮದುರೈ ಮೂಲಕ ತಂಜಾವೂರನ್ನು ತಲುಪಿದಾಗ ತಂಜಾವೂರಿನ ಅರಸ ಇಷ್ಟೊಂದು ಸಂಖ್ಯೆಯ ಪಶುಗಳಿಗೆ ನೀರನ್ನು ಕುಡಿಸಲು ಆಕ್ಷೇಪ ಎತ್ತಿದ್ದಲ್ಲದೆ ಕೆಲವು ಹಸುಗಳನ್ನು ಹಿಡಿದು ಕಟ್ಟಿಹಾಕಿದನು.

ಸೇವಾಲಾಲರ ತಂಡ ಮತ್ತು ತಂಜಾವೂರಿನ ಸೈನ್ಯದ ನಡುವೆ ‘ಪಾನೀ ಕಿ ಲಡಾಯಿ’ಎಂದು ಹೆಸರಾದ ಯುದ್ಧ ನಡೆಯಿತು. ಸೇವಾಲಾಲರ ತಂಡಕ್ಕೆ ಮೇಲುಗೈಯಾಗಿ ತಂಜಾವೂರಿನ ಅರಸ ಸಂಧಾನ ಮಾಡಿಕೊಂಡನು.

ತಂಜಾವೂರಿನಿಂದ ಚೆನ್ನೈ ಮೂಲಕ ತಿರುಪತಿಗೆ ತೆರಳಿದ ಸೇವಾಲಾಲರು ಸುಮಾರು ಎರಡು ವರ್ಷ ಅಲ್ಲಿಯೇ ಉಳಿದು ಮಹಂತರಾಗಿ ತಿಮ್ಮಪ್ಪನ ಸೇವಾ ಕೈಂಕರ್ಯ ನಡೆಸಿದರು. ನಂತರ ಹೈದರಾಬಾದಿಗೆ ತೆರಳಿದಾಗ ಅಲ್ಲಿನ ನಿಜಾಮ ಅವರಿಗೆ ತೋಲಾರಾಮ್ ಎಂಬ ಒಂದು ಬಿಳಿಕುದುರೆಯನ್ನೂ ಗರಾಸಿಯಾ ಎಂಬ ಬಿಳಿ ಗೂಳಿಯನ್ನೂ ಉಡುಗೊರೆಯಾಗಿ ನೀಡಿದನು. ಅಲ್ಲಿಂದ ಮುಂದೆ ಸೇವಾಲಾಲರು ಬಿಳಿ ಬಾವುಟ, ಬಿಳಿ ಬಟ್ಟೆಯ ಜೊತೆಗೆ ನಿಜಾಮ ನೀಡಿದ ಖಡ್ಗವನ್ನು ಹಿಡಿದು ತೋಲಾರಾಮ್ ಕುದುರೆಯ ಮೇಲೆ ಸವಾರಿ ಮಾಡುತ್ತ ತಮ್ಮ ತಂಡವನ್ನು ಮುನ್ನಡೆಸಿದರು. ಗರಾಸಿಯಾ ಗೂಳಿ ಸದಾ ಅವರ ಜೊತೆಯಾಗಿರುತ್ತಿತ್ತು.

ಹೈದರಾಬಾದಿನಿಂದ ನಾಂದೇಡ್ ಮೂಲಕ ಪೆನಗಂಗಾ ಘಾಟಿಯಲ್ಲಿ ಪ್ರಯಾಣಿಸುತ್ತಿದ್ದಾಗ ಪಿಂಡಾರರು ಇವರ ತಂಡದ ಮೇಲೆ ದಾಳಿ ನಡೆಸಿದರು. ಅವರ ದಾಳಿಯನ್ನು ಚಾಕಚಕ್ಯತೆಯಿಂದ ಎದುರಿಸಿ ಪಾರಾದ ಸೇವಾಲಾಲರು ಮುಂದುವರಿಯುತ್ತಿದ್ದಾಗ ಭಿಲ್ಲರು ಅವರ ಮೇಲೆ ದಾಳಿ ಮಾಡಿ ಗರಾಸಿಯಾ ಗೂಳಿಯನ್ನು ಅಪಹರಿಸಿದರು. ಮುಂದೆ ನಡೆದ ಕಾಳಗದಲ್ಲಿ ಗೆದ್ದು ಗೂಳಿಯನ್ನು ವಶಪಡಿಸಿಕೊಂಡು ಸೂರತ್ ಕಡೆಗೆ ಪ್ರಯಾಣ ಬೆಳೆಸಿದರು. ಸೂರತ್ತಿನ ಮಹಾರಾಜ ಇವರ ಪಶುಗಳ ಮೇಲೆ ತೆರಿಗೆ ವಿಧಿಸಲು ಮುಂದಾದಾಗ ಅದನ್ನು ವಿರೋಧಿಸಿದರು. ಸೂರತ್ತಿನ ಸೈನಿಕರು ಸೇವಾಲಾಲರ ಕೆಲವು ಕುರಿಗಳನ್ನು ಕದ್ದರು. ಸೂರತ್ತಿಗೂ ಸೇವಾಲಾಲರ ತಂಡಕ್ಕೂ ಭಯಂಕರ ಕಾಳಗವೇ ನಡೆದು ಸೇವಾಲಾಲರ ಕೈ ಮೇಲಾಯಿತು. ಅಲ್ಲಿಂದ ಮುಂದೆ ನಾಸಿಕ್, ಚಿತ್ರಕೂಟ, ಅಕೋಲಾಗಳ ಮೂಲಕ ಸಾಗಿದ ಸೇವಾಲಾಲರ ತಂಡ ರೂಯಿಗಢ ಮತ್ತು ಪೋಹ್ರಾಗಢಗಳಲ್ಲಿ ಶಾಶ್ವತವಾಗಿ ನೆಲೆ ನಿಂತಿತು. ಈ ನಡುವೆ ಅವರು ತಮಗೆ ಮಾಡಿದ ಸಹಾಯಕ್ಕಾಗಿ ಪೋರ್ಚುಗೀಸರು ಮುತ್ತಿನ ಹಾರವೊಂದನ್ನು ಕಾಣಿಕೆಯಾಗಿ ನೀಡಿದ್ದರು. ಹೀಗಾಗಿ ಜನರು ಅವರನ್ನು “ಮೋತಿವಾಳೋ” ಎಂದೂ ಅವರ ತಂಡವನ್ನು “ಮೋತಿವಾಳೋ ತಂಡ” ಎಂದೂ ಕರೆಯಲಾರಂಭಿಸಿದರು.

ಈ ಕಾಲಕ್ಕೆ ಭಾರತದಾದ್ಯಂತ ಹರಡಿದ್ದ ಬಂಜಾರರು ದೇಶದ ವ್ಯಾಪಾರವನ್ನು ನಿಯಂತ್ರಿಸುತ್ತ ಪ್ರಭಾವಿ ಸಮುದಾಯವಾಗಿ ಬೆಳೆದಿದ್ದರು. ಇದನ್ನು ಸಹಿಸದ ಬ್ರಿಟಿಷರು ಬಂಜಾರರು ಕಳ್ಳರು ಮತ್ತು ಡಕಾಯಿತರು ಎಂದು ವ್ಯವಸ್ಥಿತವಾಗಿ ಅಪಪ್ರಚಾರ ಮಾಡಲು ತೊಡಗಿದರು. ಇದರಿಂದಾಗಿ ಬಂಜಾರ ಸಮುದಾಯವು ಸಾಮಾಜಿಕ ಮತ್ತು ಆರ್ಥಿಕ ಕಷ್ಟನಷ್ಟಗಳನ್ನು ಎದುರಿಸಬೇಕಾಯಿತು. ಇದನ್ನು ಮನಗಂಡ ಸೇವಾಲಾಲರು ಬಂಜಾರ ಸಮುದಾಯದಲ್ಲಿ ಏಕತೆಯನ್ನು ಮೂಡಿಸಿ ಅವರ ಸ್ವಾಭಿಮಾನವನ್ನು ಬಡಿದೆಬ್ಬಿಸಲು ಬಹಾದುರ್ ಬಂಡಾ ಕೋಟೆಯಲ್ಲಿ ವಿಶಾಲವಾದ ಬಂಜಾರ ಸಮ್ಮೇಳನವನ್ನು ಆಯೋಜಿಸಿದರು. ಇದರಲ್ಲಿ ದೇಶದ ಎಲ್ಲೆಡೆಯಿಂದ ಬಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮಯದಲ್ಲಿ ಮಾತನಾಡಿದ ಸೇವಾಲಾಲರು “ಭಾರತವು ಒಂದು ದಿನ ಬ್ರಿಟಿಷರಿಂದ ಸ್ವತಂತ್ರವಾಗುತ್ತದೆ, ಆಗ ಬಂಜಾರರಿಗೂ ಅಧಿಕಾರ ದೊರೆಯುತ್ತದೆ, ಅವರಿಗೂ ಭಾರತಮಾತೆಯ ಸೇವೆ ಮಾಡುವ ಅವಕಾಶ ದೊರೆಯುತ್ತದೆ” ಎಂದು ಭರವಸೆ ನೀಡಿದ್ದರು.

ಸೇವಾಲಾಲರ ಜೀವನದ ಬಗ್ಗೆ ನಿಖರವಾದ ವಿವರಗಳು ದೊರೆಯುವುದಿಲ್ಲವಾದರೂ ಬಂಜಾರರ ಅನೇಕ ಜಾನಪದ ಹಾಡುಗಳ ಮೂಲಕ ಅವರು ನಡೆಸಿದ ಪವಾಡಗಳ ವಿವರಗಳು ದೊರೆಯುತ್ತವೆ. ಆದರೆ ನಾವು ಅವರನ್ನು ಸ್ಮರಿಸಬೇಕಾಗಿರುವುದು ಅವರ ಸಮಾಜ ಸುಧಾರಕ ಕಾರ್ಯಗಳಿಗಾಗಿ.

ಜನರು ಪ್ರೀತಿಯಿಂದ ಸಂತ, ಚಾರಣಿಗನ ಚಾರಣಿಗ, ಕಾಲಜ್ಞಾನಿ, ಪವಾಡಪುರುಷ, ಗುರು, ವೈದ್ಯ, ಭಾಯಾ ಎಂದೆಲ್ಲ ಗುರುತಿಸುವ ಸೇವಾಲಾಲರು ಸಮಾಜಕ್ಕೆ ನಿರಂತರವಾದ ಮಾರ್ಗದರ್ಶಕ ಗುರುವಾಗಿದ್ದಾರೆ.

ಪುಟ 9 ರಲ್ಲಿ ಮುಂದುವರಿದಿದೆ

## ನಾನು ಕಂಡಂತೆ



ಅನಂತಕುಮಾರ್

# ಸರಳ, ಸಜ್ಜನ, ಸಮೃದ್ಧ ರಾಜಕಾರಣಿ



ಡಾ.ಸಿ.ಎಂ ಲಕ್ಷ್ಮಣ್
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಜನಸಂಖ್ಯಾ ಸಂಶೋಧನ ಕೇಂದ್ರ,
ಬೆಂಗಳೂರು

ಶ್ರೀ ಅನಂತಕುಮಾರ್ ಅವರ ಪರಿಚಯ ನನಗೆ 1992ರಲ್ಲಿ ಆಯಿತು. ಇದು ಆಕಸ್ಮಿಕವೋ ಅನುಬಂಧವೋ ಎಂದು ನನಗೆ ತಿಳಿಯದು. 1991-92ರ ಸಮಯದಲ್ಲಿ ಅವರು ಭಾರತೀಯ ಜನತಾ ಪಕ್ಷದ (ಬಿಜೆಪಿ) ಕರ್ನಾಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಶ್ರೀ ಬಿ. ಎಸ್. ಯಡಿಯೂರಪ್ಪ, ಶ್ರೀ ಎ. ಕೆ. ಸುಬ್ಬಯ್ಯ, ಶ್ರೀ ಡಿ. ಹೆಚ್. ಶಂಕರಮೂರ್ತಿ ಮತ್ತು ದೊಡ್ಡಬಳ್ಳಾಪುರದ ಶಾಸಕರಾದ ಶ್ರೀ ಹನುಮಂತ ಸಿಂಗ್ - ಆ ಸಂದರ್ಭದಲ್ಲಿ ಬಿಜೆಪಿಯೊಂದಿಗೆ ಇದ್ದ ಬೆರಳೆಣಿಕೆಯ ಶಾಸಕರು. ನಾನು 1992ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯಲ್ಲಿ ಪಿಎಚ್‌ಡಿ ವ್ಯಾಸಂಗ ಮಾಡುತ್ತಿದ್ದೆ. ಈ ಸಂದರ್ಭದಲ್ಲಿ ಶ್ರೀ ಅನಂತಕುಮಾರ್ ತಮ್ಮ ಕೆಂಪು ಫಿಯೆಟ್ ಕಾರಿನಲ್ಲಿ ನಮ್ಮ ಹಾಸ್ಟೆಲ್ಲಿಗೆ ಬಂದು ನನ್ನನ್ನು ಭೇಟಿಯಾದರು. ಅವರು ಬೆಂಗಳೂರಿನ ಲಾಲ್‌ಬಾಗಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಸಮಾರಂಭವನ್ನು ಆಯೋಜಿಸಿದ್ದರು. ನನ್ನನ್ನು ಮತ್ತು ನನ್ನ ಗೆಳೆಯರನ್ನು ಆ ಸಮಾರಂಭಕ್ಕೆ ಆಹ್ವಾನಿಸಿದ್ದರು.

ಲಾಲ್‌ಬಾಗಿನಲ್ಲಿ ಪ್ರಥಮ ಬಾರಿಗೆ ಡಾ. ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ನಾವು 15 ವಿದ್ಯಾರ್ಥಿ ಗೆಳೆಯರು ಈ ಸಮಾರಂಭದಲ್ಲಿ ಭಾಗವಹಿಸಿ ಅದರ ಯಶಸ್ಸಿಗೆ ಕಾರಣರಾದೆವು. ದುರದೃಷ್ಟವೆಂದರೆ, ಆ ನಂತರ ಬಿಜೆಪಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿದ ಉದಾಹರಣೆಗಳು ಕಡಿಮೆ. ಹೀಗೆ ಪರಿಚಯವಾದ ಶ್ರೀ ಅನಂತಕುಮಾರ್ ಅವರನ್ನು ನನ್ನ ಪಿಎಚ್‌ಡಿ ಕಾರ್ಯದ ಒತ್ತಡದಿಂದ ಮರೆತುಬಿಟ್ಟಿದ್ದೆ.

1994ರಲ್ಲಿ ಒಮ್ಮೆ ಬೆಂಗಳೂರಿನ ಮಿಷನ್ ರಸ್ತೆಯಲ್ಲಿ ಬಿಜೆಪಿಯ ಕಾರ್ಯಕ್ರಮಕ್ಕೆ ಪ್ರಶಸ್ತಿ ಮತ್ತು ಸ್ಮರಣಚಿಹ್ನೆಗಳನ್ನು ಖರೀದಿಸಲು ಅನಂತಕುಮಾರ್ ಅವರು ಬಂದಿದ್ದರು. ಅಲ್ಲಿ ಅವರು ನನ್ನನ್ನು ನೋಡಿದರು ಮತ್ತು ತಮ್ಮ ವಿಶಿಷ್ಟ ಶೈಲಿಯಲ್ಲಿ, "ಏನ್ರೀ ಲಕ್ಷ್ಮಣ್? ನಿಮ್ಮ ಸುಳಿವೇ ಇಲ್ಲ!" ಎಂದು ಹೇಳಿ ತಮ್ಮ ವಿಸಿಟಿಂಗ್ ಕಾರ್ಡ್ ನನಗೆ ನೀಡಿದರು. ಆಗ ಅವರು ಬಿಜೆಪಿಯ ಕರ್ನಾಟಕ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರ ವಿಳಾಸವನ್ನು ಪಡೆದ ನಾನು ಅಂದಿನಿಂದ ಅವರ ಸಂಪರ್ಕದಲ್ಲಿದ್ದೆ. ವೈಯ್ಯಾಲಿಕಾವಲಿನಲ್ಲಿದ್ದ ಅವರ ನಿವಾಸಕ್ಕೆ ಆಗಾಗ್ಗೆ ಹೋಗಿಬರುತ್ತಿದ್ದೆ. 1996ರಲ್ಲಿ ಅವರು ಮೊದಲ ಬಾರಿಗೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸಂಸತ್ತಿಗೆ ಆಯ್ಕೆಯಾದರು. ಅಂದಿನಿಂದ ನಾನು ಅವರಿಂದ ಪಡೆದ ಸಹಕಾರ, ಬೆಂಬಲ ಮತ್ತು ಪ್ರೋತ್ಸಾಹವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

ಶ್ರೀ ಅನಂತಕುಮಾರ್ ಅವರಿಗೆ ದಲಿತರ ಬಗ್ಗೆ ಅಪಾರ ಕಾಳಜಿ ಇತ್ತು. 1993ರಿಂದ 1997ರವರೆಗೆ ನಾನು ಸಂಶೋಧನೆ ನಡೆಸಿ 1998ರಲ್ಲಿ ಡಾಕ್ಟರೇಟ್ ಪಡೆದೆ. ಈಗ ರಾಜ್ಯ, ದೇಶ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನೆ ಮತ್ತು ತರಬೇತಿಗಾಗಿ ಹೆಸರು ಗಳಿಸಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ನನ್ನ ಸಂಶೋಧನಾ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಹಣಕಾಸಿನ ಕೊರತೆಯಿತ್ತು. ಆ ಸಂದರ್ಭದಲ್ಲಿ ಅವರ ನಿವಾಸಕ್ಕೆ ಹೋಗಿ ತಿಳಿಸಿದಾಗ, ಅವರು ತಮ್ಮ ಆಪ್ತ ಕಾರ್ಯದರ್ಶಿ ಶ್ರೀ ಸುಬ್ಬಣ್ಣನವರನ್ನು ಕರೆದು, ನನಗೆ 10,000 ರೂಪಾಯಿಗಳನ್ನು ನೀಡಿ, "ನಿಮ್ಮ ಪಿಎಚ್‌ಡಿಯನ್ನು ಪೂರ್ಣಗೊಳಿಸಿ" ಎಂದು ಆಶೀರ್ವದಿಸಿದರು. ಆ ಮೊತ್ತ ಆ ದಿನಗಳಲ್ಲಿ ತುಂಬಾ ದೊಡ್ಡದಾಗಿತ್ತು. ನಾನು ಪಿಎಚ್‌ಡಿ ಪಡೆದ ನಂತರ, ಅವರನ್ನು ಭೇಟಿಯಾಗಿ ಸಿಹಿ ನೀಡಿ ಧನ್ಯವಾದ ತಿಳಿಸಿದೆ.

ಆ ಸಂದರ್ಭದಲ್ಲಿ ಅವರು "ನೀವು 1992ರಿಂದ ನನ್ನ ಜೊತೆ ಇದ್ದಿದ್ದರೆ, ನಾನು ನಿಮ್ಮನ್ನು ಶಾಸಕನನ್ನಾಗಿ ಮಾಡುತ್ತಿದ್ದೆ" ಎಂದಿದ್ದರು. ಆದರೂ ನನ್ನ ಮನಸ್ಸು ರಾಜಕೀಯದ ಕಡೆಗೆ ಒಲಿಯಲಿಲ್ಲ. 1998ರಲ್ಲಿ ಅನಂತಕುಮಾರ್ ಅವರು ಕೇಂದ್ರ ವಿಮಾನಯಾನ ಸಚಿವರಾಗಿದ್ದರು. ಆ ಸಮಯದಲ್ಲಿ ನನಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿಯಿದ್ದ ಒಂದು ಹುದ್ದೆಗೆ ಸಂದರ್ಶನ ಪತ್ರ ಬಂದಿತ್ತು. ಅದಕ್ಕೆ ಶಿಫಾರಸು ಮಾಡಿಸಲು, ತುಮಕೂರಿನಿಂದ ಬಸವನಗುಡಿಯಲ್ಲಿದ್ದ ಅವರ ಮನೆಗೆ ಹೋದೆ. ಅವರು ಕೇಂದ್ರ ಸಚಿವರಾಗಿದ್ದರಿಂದ, ಅವರ ಕೆಲಸದ ಒತ್ತಡವಿತ್ತು. ಅವರು ಎಚ್‌ಎಎಲ್ ವಿಮಾನ ನಿಲ್ದಾಣದ ಕಡೆಗೆ ಧಾವಿಸುತ್ತಿದ್ದರು. ನಾನು ಅವರನ್ನು ಹಿಂಬಾಲಿಸಿ, ವಿಮಾನ ನಿಲ್ದಾಣದಲ್ಲಿ ಅವರನ್ನು ಭೇಟಿಯಾದೆ. ಅವರು ನನ್ನ ಮನವಿಯನ್ನು ಆಲಿಸಿ, ನನ್ನ ಕೆಲಸಕ್ಕೆ ಶಿಫಾರಸು ಮಾಡಿದರು. ಇದು ಅವರ ದಲಿತರ ಬಗ್ಗೆ ಇದ್ದ ಕಾಳಜಿಗೆ ಒಂದು ನಿದರ್ಶನ.

ಅನಂತಕುಮಾರ್ ಅವರ ಜ್ಞಾನ ಮತ್ತು ನೆನಪಿನ ಶಕ್ತಿ ಅಪಾರವಾಗಿತ್ತು. ಅವರ ಮುಂದೆ ನೂರಾರು ಜನ ಇದ್ದರೂ, ಅವರು ನನ್ನನ್ನು ಗುರುತಿಸಿ, "ಇವರು ನನ್ನ ಬೆಸ್ಟ್ ಫ್ರೆಂಡ್" ಎಂದು ಪರಿಚಯಿಸುತ್ತಿದ್ದರು. ಒಮ್ಮೆ ನಾನು ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಲು ಅವರ ಸಹಾಯ ಕೋರಿದೆ. ಅವರು ತಕ್ಷಣ ತುಮಕೂರು ಗ್ರಾಮಾಂತರದ ಶಾಸಕರಾದ ಶ್ರೀ ಸುರೇಶ್ ಗೌಡರಿಗೆ ದೂರವಾಣಿ ಮಾಡಿ, ನನ್ನ ಬಗ್ಗೆ ತಿಳಿಸಿದರು. ನಂತರ ನಾನು ಶ್ರೀ ಸುರೇಶ್ ಗೌಡರನ್ನು ಭೇಟಿಯಾದಾಗ, ಅವರು "ನಿಮಗೆ ಅನಂತಕುಮಾರ್ ಅವರ ಬೆಂಬಲವಿದೆ, ನೀವು ಗ್ರೇಟ್ ಆಗಿದ್ದೀರಿ" ಎಂದು ಹೇಳಿದರು.

ನನ್ನ ಪ್ರತಿ ಚುನಾವಣೆಯಲ್ಲೂ ನಾನು ಒಂದು ದಿನ ಪ್ರಚಾರಕ್ಕೆ ಹೋಗುತ್ತಿದ್ದೆ. ಯಾವುದೇ ವಿಷಯದಲ್ಲಿ ನಾನು ಅವರನ್ನು ಸಂಪರ್ಕಿಸುತ್ತಿದ್ದೆ. ಒಮ್ಮೆ ಅವರ ವೈಯಕ್ತಿಕ ಮೊಬೈಲಿಗೆ ಕರೆ ಮಾಡಿ, "ಸರ್, ನನಗೆ ಒಂದು ಅಪಾಯಿಂಟ್ಮೆಂಟ್ ಕೊಡಿ" ಎಂದು ಕೇಳಿದೆ. ಅವರು, "ಲಕ್ಷ್ಮಣ್, ನಿಮಗ್ಯಾಕೆ ಅಪಾಯಿಂಟ್ಮೆಂಟ್? ನನ್ನ ಕಚೇರಿ ಯಾವಾಗಲೂ ತೆರೆದಿರುತ್ತದೆ, ನಿಮಗೆ ಸ್ವಾಗತ" ಎಂದು ಹೇಳಿದರು.

ನಾನು ಅವರಿಂದ ಪಡೆದ ಸಹಕಾರ ಅಪಾರ. ಅಂತಹ ಸರಳ, ಸಜ್ಜನ ರಾಜಕಾರಣಿಯೊಂದಿಗೆ ಸಂಪರ್ಕ ಹೊಂದಿದ್ದು ನನ್ನ ಅದೃಷ್ಟ. ಅವರಿಂದ ನಾನು ಅಪಾರ ಅನುಭವವನ್ನು ಗಳಿಸಿದೆ. 2018ರಲ್ಲಿ ಐಐಎಸ್‌ಇಸಿಗೆ ಕೇಂದ್ರ ಸಚಿವರಾಗಿ ಬಂದಾಗ, ಅವರಿಗೆ ಸನ್ಮಾನ ಮಾಡುವ ಅವಕಾಶ ಸಿಕ್ಕಿತು. 2ನೇ ಬಾರಿ ಉಪರಾಷ್ಟ್ರಪತಿ ಶ್ರೀ ವೆಂಕಯ್ಯ ನಾಯ್ಡು ಅವರು ಐಐಎಸ್‌ಇಸಿಗೆ ಬಂದಾಗ, ಅನಂತಕುಮಾರ್ ಅವರು ಕೂಡ ಬಂದಿದ್ದರು. ಆ ಸಂದರ್ಭದಲ್ಲಿ ನಾನು ಅವರನ್ನು ನನ್ನ ಸಹೋದ್ಯೋಗಿಗಳಿಗೆ ಪರಿಚಯಿಸಿದೆ. ನಂತರ ಅವರು ನನ್ನನ್ನು ಕರೆದು, "ನಿಮ್ಮ ಸಿವಿ ಕೊಡಿ" ಎಂದು ಹೇಳಿದರು. ಆದರೆ ಕೆಲವೇ ದಿನಗಳಲ್ಲಿ ಅವರು ಕ್ಯಾನ್ಸರ್ ಕಾಯಿಲೆಗೆ ಬಲಿಯಾಗಿ ನಮ್ಮನ್ನು ಅಗಲಿದರು.

ಶ್ರೀ ಅನಂತಕುಮಾರ್ ಅವರು ಒಳ್ಳೆಯ ವಾಗ್ಮಿ, ಚಿಂತನಶೀಲರು, ಸರಳ ಮತ್ತು ಸಜ್ಜನ ರಾಜಕಾರಣಿ. ದೀನ-ದಲಿತರ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದರು. ಈ ದೇಶ ಕಂಡ ಅತ್ಯುತ್ತಮ ಸಂಸದ್ ಪಟುಗಳಲ್ಲಿ ಒಬ್ಬರು. ಕರ್ನಾಟಕದಲ್ಲಿ ಬಿಜೆಪಿ ಬೆಳೆಯಲು ಅವರು ಸುದೀರ್ಘ ಪ್ರಯತ್ನ ನಡೆಸಿದರು. ಇದು ನಾನು ಕಂಡ ಅನಂತಕುಮಾರ್.

ಪುಟ 8 ರಿಂದ

## 'ಸಂತ ಸೇವಾಲಾಲ ಮಹಾರಾಜರು

"ಯಾರಿಗೂ ಯಾವಕಾರಣಕ್ಕೂ ತಾರತಮ್ಯ ಮಾಡಬೇಡಿ, ಪ್ರಕೃತಿಯೊಂದಿಗೆ ಒಂದಾಗಿ ಬಾಳಿ, ಹಸಿರು ಬೆಳೆಸಿ, ಪ್ರಾಣಿಗಳನ್ನು ಕಟುಕರಿಗೆ ಮಾರಬೇಡಿ, ಸ್ತ್ರೀಯರನ್ನು ಗೌರವಿಸಿ, ಹೆಣ್ಣು ಮಕ್ಕಳನ್ನು ದೇವಿಯರಂತೆ ಪರಿಗಣಿಸಿ, ಹಿಂಸೆಯನ್ನು ತ್ಯಜಿಸಿ, ಸುಳ್ಳು ಹೇಳಬೇಡಿ, ನಿಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳಿ, ಹಿರಿಯರನ್ನು ಗೌರವಿಸಿ, ಕಿರಿಯನ್ನು ಪ್ರೀತಿಸಿ, ದುರ್ಬಲರಿಗೆ ಸಹಾಯ ಮಾಡಿ, ವರದಕ್ಷಿಣೆಯನ್ನು ತಿರಸ್ಕರಿಸಿ, ಶಿಕ್ಷಣಕ್ಕೆ ಮಹತ್ವ ನೀಡಿ, ನಗರಗಳಿಂದ ದೂರವಿರಿ, ಸ್ವಚ್ಛತೆಗೆ ಪ್ರಾಧಾನ್ಯ ನೀಡಿ, ಸತಿ ಭವಾನಿಯ ಆರಾಧನೆ ಮಾಡಿ" – ಇವು ಸೇವಾಲಾಲರ ಕೆಲವು ಬೋಧನೆಗಳು.

ಸಮುದಾಯದ ಉದ್ಧಾರ ಸಮುದಾಯದ ಒಳಗಿನಿಂದಲೇ ನಡೆಯಬೇಕು ಎಂಬುದನ್ನು ತಮ್ಮ ಬದುಕಿನ ಮೂಲಕ ಸಾರಿದ ಸೇವಾಲಾಲರು ೧೮೦೬ರ ಡಿಸೆಂಬರ್ ೪ರಂದು ರೂಯಿಗಡದಲ್ಲಿ ನಿಧನರಾದರು. ಪೋಹ್ರಾಗಡದಲ್ಲಿ ಅವರು ಸ್ಥಾಪಿಸಿದ ಜಗದಂಬಾ ದೇವಿಯ ದೇವಾಲಯ ಮತ್ತು ಅವರ ಸಮಾಧಿ ಇಂದು ಯಾತ್ರಾ ಸ್ಥಳವಾಗಿದೆ. ಅವರು ಜನಿಸಿದ ಸೂರಗೊಂಡನ ಕೊಪ್ಪವೂ ಭಾಯಾಗಢ ಎಂಬ ಹೆಸರಿನಿಂದ ಸಾವಿರಾರು ಜನರನ್ನು ಆಕರ್ಷಿಸುತ್ತಿದೆ.

## ಲಾರಿ ಗಟ್ಟಲೆ ತ್ಯಾಜ್ಯ ತಡೆದ ಪ್ಲೇಟ್ ಬ್ಯಾಂಕ್ ಯೋಜನೆ:



ಸೇಡಂನಲ್ಲಿ ಜರುಗಿದ ಏಳನೇ ಭಾರತೀಯ ಸಂಸ್ಕೃತಿ ಉತ್ಸವ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಬಳಕೆ ಆಗಬಾರದು ಎಂಬ ಉದ್ದೇಶದಿಂದ ಬೆಂಗಳೂರಿಂದ 25,000 ಸ್ಟೀಲ್ ತಟ್ಟೆಗಳನ್ನು ಈ ಉತ್ಸವಕ್ಕೆ ಕಳಿಸಲಾಗಿತ್ತು. ಉತ್ಸವದಲ್ಲಿ ಪಾಲ್ಗೊಳ್ಳುವ ಲಕ್ಷಾಂತರ ಜನರಿಗೆ ಊಟ, ಉಪಾಹಾರದ ವ್ಯವಸ್ಥೆಯನ್ನು ಈ ತಟ್ಟೆಗಳಲ್ಲಿ ಮಾಡಲಾಯಿತು. ಒಂಬತ್ತು ದಿನಗಳ ಕಾಲ ನಡೆದ ಈ ಉತ್ಸವದಲ್ಲಿ ಈ ಪ್ಲೇಟ್ ಬ್ಯಾಂಕ್ ಯೋಜನೆಯಿಂದ ಲಾರಿಗಟ್ಟಲೆ




**ಉತ್ಸವದಲ್ಲಿ ಅದಮ್ಯ ಚೇತನ ಪ್ರದರ್ಶನ ಮಳಿಗೆ:** ಅನ್ನ ಅಕ್ಷರ ಆರೋಗ್ಯ, ಪ್ರಕೃತಿ, ಸಂಸ್ಕೃತಿ, ಪರಂಪರೆಯ ನಿರಂತರತೆಗಾಗಿ ಕೆಲಸ ಮಾಡುತ್ತಿರುವ ಸಂಸ್ಥೆಯು ಕಳೆದ 27 ವರ್ಷಗಳಿಂದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟವನ್ನು ಪೂರೈಸುತ್ತಿರುವ ವಿಷಯವನ್ನು ತಿಳಿದ ಪ್ರೇಕ್ಷಕರು ಪ್ರಶಂಸೆ ವ್ಯಕ್ತಪಡಿಸಿದರು. ಶೂನ್ಯತ್ಯಾಜ್ಯ ಅಡುಗೆಮನೆಯಲ್ಲಿ ಪೆಟ್ರೋಲಿಯಂ ಇಂಧನ ಬಳಸದೆ ಅಡುಗೆ ತಯಾರಿಸುವ ವಿಧಾನವನ್ನು ಕೇಳಿ ಅಚ್ಚರಿ ಪಟ್ಟರು. ಪ್ರದರ್ಶನ ಮಳಿಗೆಯಲ್ಲಿ ಅದಮ್ಯ ಚೇತನದ ಅನ್ನಪೂರ್ಣ ಅಡುಗೆ ಮನೆಯ ಮಾದರಿ, ಹಸಿರು ಭಾನುವಾರ, ಅದಮ್ಯ ಚೇತನ ಗೋಡೆಪತ್ರಿಕೆ, ನಿತ್ಯ ಅನ್ನದಾನ ಯೋಜನೆಯ ನಿರಂತರ ಚಟುವಟಿಕೆಗಳ ವಿವರಗಳಿರುವ ಫಲಕಗಳು ಗಮನ ಸೆಳೆದವು.

**ಶ್ರದ್ಧೆಯ ಶಿಲ್ಪ** : ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6;10ಕ್ಕೆ ಮೈಸೂರು ಅಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಕರ್ನಾಟಕ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯು ಈ ತಿಂಗಳಲ್ಲಿ ತುಮಕೂರು ಜಿಲ್ಲೆಯ ತಂಡಗದ ದೇವಾಲಯ, ಚಿತ್ರದುರ್ಗ ಜಿಲ್ಲೆಯ ನೀರಗುಂದದ ದೇವಾಲಯ, ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯವನ್ನು ಪರಿಚಯಿಸಲಾಯಿತು.

## ತಿಂಗಳ ವರದಿ
### (15 ಜನವರಿ - 15 ಫೆಬ್ರವರಿ 2025)

**ಹಸಿರು ಭಾನುವಾರ:** ಅದಮ್ಯ ಚೇತನದ 'ಹಸಿರು ಭಾನುವಾರ' ಗಿಡ ನೆಡುವ ಕಾರ್ಯಕ್ರಮದಲ್ಲಿ ಪ್ರತಿವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ವರ್ಗದ ಜನರು ಸ್ವಯಂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಅದರಂತೆ 474, 475, 476, ಮತ್ತು 477ನೇ ಭಾನುವಾರಗಳನ್ನು ಕ್ರಮವಾಗಿ, ಅಲುಮ್ನಿ ಅಸೋಸಿಯೇಷನ್ ಆಫ್ ಯು ವಿ ಸಿ ಇ ಸಿಲ್ವರ್ ಜುಬಿಲಿ ಕಟ್ಟಡ ಆವರಣ, ಚಾಮರಾಜ ಪೇಟೆಯ ಸರ್ಕಾರಿ ಕನ್ನಡ- ಆಂಗ್ಲ ಮಾದರಿ ಪ್ರಾಥಮಿಕ ಶಾಲೆಯ ಆವರಣ, ಬೆಂಗಳೂರು ವಿಶ್ವವಿದ್ಯಾಲಯದ, ಬಯೋ ಕ್ಯಾಂಪಸ್ ಆವರಣ, ಬೆಂಗಳೂರು ವಿಶ್ವವಿದ್ಯಾಲಯದ ಎನ್ ಎಸ್ ಎಸ್ ಭವನದ ಹಿಂಭಾದ ಆವರಣದಲ್ಲಿ ನಡೆಸಲಾಗಿದ್ದು, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು ಭಾಗವಹಿಸಿದ್ದರು.

**ಅದಮ್ಯ ಚೇತನ ಗೋಡೆ ಪತ್ರಿಕೆ:** ಕೇವಲ ಪಠ್ಯಪುಸ್ತಕಕ್ಕೆ ಮಕ್ಕಳನ್ನು ಸೀಮಿತಗೊಳಿಸುವುದರಿಂದ ಅವರ ವಿಕಾಸ ಸಾಧ್ಯವಿಲ್ಲ. ಹೊರಜಗತ್ತಿನ ಆಗು-ಹೋಗುಗಳ ಬಗ್ಗೆ ಅರಿವು ಮೂಡಿಸಬೇಕು. ಪ್ರಾಪಂಚಿಕ ಅಥವಾ ಸಾಮಾನ್ಯ ಜ್ಞಾನದಿಂದ ಮಕ್ಕಳು ವಂಚಿತರಾಗಬಾರದು ಎಂಬ ಉದ್ದೇಶದಿಂದ "ಅದಮ್ಯ ಚೇತನ" ಗೋಡೆ ಪತ್ರಿಕೆ ಕೆಲಸ ಮಾಡುತ್ತಿದೆ. ಈ ಗೋಡೆ ಪತ್ರಿಕೆ ಕರ್ನಾಟಕದ ನೂರಾರು ಶಾಲೆಗಳಿಗೆ ತಲುಪುತ್ತಿದೆ. ಮಕ್ಕಳು ಆಸಕ್ತಿಯಿಂದ ನೈಸರ್ಗಿಕ ವಿಸ್ಮಯಗಳು, ಅಚ್ಚರಿಯ ಸಂಗತಿಗಳು, ವೈಜ್ಞಾನಿಕ ವಿಶೇಷಗಳು, ಹಸಿರು ಜೀವನ ಶೈಲಿಗಳ ವಿವರಗಳು ಓದಿ ಖುಷಿ ಪಡುತ್ತಿದ್ದಾರೆ.




## ಅಭಿನಂದನೆ



**ಬೆಂಗಳೂರಿನ ಪ್ಯಾಲೆಸ್ ರಸ್ತೆಯ ಜ್ಞಾನಜ್ಯೋತಿ ಸಭಾಂಗಣದಲ್ಲಿ 2025ರ ಫೆಬ್ರವರಿ 07ರಂದು ಜರುಗಿದ ಸಮಾರಂಭದಲ್ಲಿ ಅದಮ್ಯ ಚೇತನದ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಸನ್ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಿ. ಕೆ ಶಿವಕುಮಾರ್ ಅವರು TV9 ಕನ್ನಡ ನೆಟ್‌ವರ್ಕ್ ವತಿಯಿಂದ ಸಮಾಜ ಸೇವಾ ವಿಭಾಗದಲ್ಲಿ 'ಹೆಮ್ಮೆಯ ಕನ್ನಡತಿ' ಪ್ರಶಸ್ತಿಯನ್ನು ನೀಡಿ ಗೌರವಿಸಿದರು.**

ಅನಂತಪಥ

Inputs: Poornaprazna / ACF / AKP / GM Inamdar/ Gopal T.S / K. Janardhana Thunga / Sanjay R / Trivikram Joshi
Photographs: Gopal TS / Kengeri Chakrapani/ Internet Sources / AKP / ACF/
Printed at: Rashtrothana Mudranalaya, Chamarajpet, Bengaluru
Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415



ಜ್ಯ ಉತ್ಸವಕ್ಕೆ ಮುನ್ನುಡಿ ಬರೆಯಲಾಯಿತು.

# ಅನಂತ ಚಿತ್ರಸಂಪುಟ

**ಕೇಂದ್ರ ಮಂತ್ರಿಮಂಡಲದ ಪ್ರಮುಖ ಸದಸ್ಯರಾಗಿದ್ದ ಶ್ರೀ ಅನಂತಕುಮಾರರು ವಿದೇಶೀ ನಿಯೋಗಗಳ ಜೊತೆ ನಿರಂತರವಾಗಿ ಸಂವಾದ ನಡೆಸುತ್ತಿದ್ದರು.**

























# ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಜನವರಿ 29 ರಂದು ನಡೆದ ನಾಲವಾರದ ಕೋರಿ ಸಿದ್ದೇಶ್ವರ ಮಠದ ಜಾತ್ರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿ, ಪರಮಪೂಜ್ಯ ಶ್ರೀ ಸಿದ್ಧ ತೋಟೇಂದ್ರ ಶಿವಾಚಾರ್ಯರ ಆಶೀರ್ವಾದ ಪಡೆದರು.



ಅಟಲ್ ಬಿಹಾರಿ ವಾಜಪೇಯಿಯವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಅವರಿಗೆ ಆತ್ಮೀಯರಾಗಿದ್ದವರ ಕುಟುಂಬಕ್ಕೆ ಭೇಟಿ ನೀಡಿ ಛಾಯಾಚಿತ್ರ ಸಂಗ್ರಹ ಮಾಡುವ ಅಭಿಯಾನದಡಿಯಲ್ಲಿ ಅನಂತಕುಮಾರರ ಮನೆಗೆ ಭೇಟಿ ನೀಡಿದ ರಾಜ್ಯ ಬಿಜೆಪಿ ಪ್ರಮುಖರು



ಸಾವಯವ ಮತ್ತು ಸಿರಿಧಾನ್ಯ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ - 2025ರ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಸನ್ಮಾನ್ಯ ಚೆಲುವರಾಯ ಸ್ವಾಮಿ ಅವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಸನ್ಮಾನಿಸಿದರು.




ಜನವರಿ 26 ರಂದು ಅದಮ್ಯ ಚೇತನ ಸಂಸ್ಥೆಯ ಆವರಣದಲ್ಲಿ ಗಣರಾಜ್ಯೋತ್ಸವದ ಆಚರಿಸಲಾಯಿತು.



ಅದಮ್ಯ ಚೇತನ ಸಂಸ್ಥೆಯಲ್ಲಿ ಪ್ರತಿ ಗುರುವಾರ ನಡೆಯುವ ಭಗವದ್ಗೀತ ಪಠಣ ಕಾರ್ಯಕ್ರಮ.



ಬೆಂಗಳೂರಿನ ಮೂಲದ ಐಟಿ ಕಂಪನಿಯಾದ ಡಿಲಿಜೆಂಟ್, ಅದಮ್ಯ ಚೇತನ ಸಂಸ್ಥೆಗೆ ಎರಡು ಬಯೋಮಾಸ್ ಸ್ಟವ್ ಮತ್ತು ಎರಡು ಕಾಂಪೋಸ್ಟ್ ಘಟಕಗಳನ್ನು ದೇಣಿಗೆ ನೀಡಿತು.




ಅದಮ್ಯ ಚೇತನದ 'ಹಸಿರು ಭಾನುವಾರ' ಗಿಡ ನೆಡುವ ಕಾರ್ಯಕ್ರಮದಲ್ಲಿ ಪ್ರತಿವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ವರ್ಗದ ಜನರು ಸ್ವಯಂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.




ಹುಬ್ಬಳ್ಳಿಯ ಶ್ರೀ ಈಶ್ವರ ದೇವಸ್ಥಾನ ಆವರಣದಲ್ಲಿ ಅದಮ್ಯ ಚೇತನದ ನಿತ್ಯ ಅನ್ನದಾನ